ಸಂಪುಟ: 01 ಸಂಚಿಕೆ: 56 ಪುಟ: 04 ಬೆಲೆ: 02 ಗುರುವಾರ ಆಗಸ್ಟ್ 06 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 56 Pages:04 Price:02 THURSDAY AUGUST 06 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಕೆಲವು ಮಹಾನುಭಾವರು ಬೇರೆಯವರ ಪುಣ್ಯದ ಕ್ಷೀರವನ್ನೆಲ್ಲಾ ಸವಿದು, ಕೊನೆಯಲ್ಲಿ ಪಾಪದ ಫಲ ಎಂದು ಹೇಳಿ ವಿಜೃಂಭಿಸುತ್ತಾರೆ.ಆಗ ಬೇರೆಯವರ ಪುಣ್ಯವು ಮರೆಮಾಚಿ ಪಾಪವೆ ಮೈಲುಗಲ್ಲಾಗುತ್ತದೆ. ಇದು ಇಂದಿನ ಕಲಿಯುಗದ ವಸ್ತುಸ್ಥಿತಿ.



ವಾಣಿ ಭಂಡಾರಿ.

■ ಬರ ವೀಕ್ಷಣೆಯೊಂದಿಗೆ ಜಿಲ್ಲೆಯಲ್ಲಿ ಪುನಃ ಕಾರ್ಯಾರಂಭಿಸಿದ ಸಚಿವರು ■ ಮತ್ತೊಮ್ಮೆ ಸಚಿವರಾಗಿ ತವರು ಜಿಲ್ಲೆಗೆ ಮೊದಲ ಬಾರಿಗೆ ಆಗಮಿಸಿದ ಸಚಿವರಿಗೆ ಅದ್ದೂರಿ ಸ್ವಾಗತ

# ಬೆಳೆ ಹಾನಿ ಪರಿಶೀಲಿಸಿದ ಸಚಿವ ತಂಗಡಗಿ

ಕರ್ನಾಟಕ ಸರ್ಕಾರದ ಸಂಪುಟ ದರ್ಜೆ ಸಚಿವರಾದ ಶ್ರೀ ಶಿವರಾಜ ಎಸ್. ತಂಗಡಗಿ ಅವರು ಪೂರ್ವ ನಿಗದಿಯಂತೆ ಆಗಸ್ಟ್ 5ರಂದು ಕೊಪ್ಪಳ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಬರ ಪರಿಸ್ಥಿತಿಯ ಅವಲೋಕನ ನಡೆಸಿದರು.

■ ಮೊದಲಿಗೆ ಗಂಗಾವತಿ ತಾಲ್ಲೂಕಿನ ವೆಂಕಟಗಿರಿ ಹೋಬಳಿಯ ವ್ಯಾಪ್ತಿಯ ಬಂಡ್ರಾಳ ಗ್ರಾಮಕ್ಕೆ ತೆರಳಿ ಬೆಳೆ ಹಾನಿ ಹಾಗೂ ಬರ ವೀಕ್ಷಣೆ ನಡೆಸಿದರು.



■ ಬಂಡ್ರಾಳ ಗ್ರಾಮದ ಹನುಮಮ್ಮ ಗಂಡ ಮಲಿಯಪ್ಪ ನಾಯಕ ಅವರ ಒಂದು ಎಕರೆ 36 ಗುಂಟೆಯಲ್ಲಿ ಬೆಳೆದ ಸಜ್ಜೆ ಬೆಳೆ ವೀಕ್ಷಣೆ ನಡೆಸಿದರು. ಮಳೆಯಿಲ್ಲದೇ ಬೆಳೆ ಹಾಳಾಗಿದೆ ಎಂದು ಹನುಮಮ್ಮ ಮತ್ತು ಅವರ ಮಕ್ಕಳು ಸಚಿವರ ಎದುರು ತಮ್ಮ ಅಳಲು ತೋಡಿಕೊಂಡರು.

■ ಗಡ್ಡಿ ಗ್ರಾಮದ ಮದ್ದಾನಪ್ಪ ತಂದೆ ನಾಗಪ್ಪ ಭಜಂತ್ರಿ ಅವರ ಹೊಲದಲ್ಲಿನ ಮೆಕ್ಕೆ ಜೋಳ ಬೆಳೆಯು ಸಹ ಮಳೆಯಿಲ್ಲದೆ ಹಾಳಾಗಿದೆ ಎಂದು ಗಡ್ಡಿ ಗ್ರಾಮಸ್ಥರು ಸಚಿವರಿಗೆ ತಿಳಿಸಿದರು.

### ಕಂದಾಯ ಇಲಾಖೆಗೆ ವರದಿ:

ನಾಳೆ ಆಗಸ್ಟ್ 06ರಂದು ಕೊಪ್ಪಳದಲ್ಲಿ ಅಧಿಕಾರಿಗಳೊಂದಿಗೆ ಸಭೆ ಮಾಡುತ್ತೇನೆ. ಸಿಎಂ ಅವರು ಎಲ್ಲ ಸಚಿವರಿಗೆ ಸೂಚನೆ ನೀಡಿ ಬರ ವೀಕ್ಷಣೆ ನಡೆಸಲು ಹೇಳಿದ್ದಾರೆ. ಜಿಲ್ಲೆಯಲ್ಲಿ ಇಂದು, ನಾಳೆ, ನಾಡಿದ್ದು ವಿವಿಧೆಡೆ ಸಂಚರಿಸಿ ಮುಂಗಾರು ಋತುವಿನ ಎಲ್ಲ ಬೆಳೆಗಳ ಪರಿಸ್ಥಿತಿ ಅವಲೋಕಿಸುತ್ತೇನೆ. ಬೆಳೆ ಹಾನಿಗೆ ಏನು ಪರಿಹಾರ ಕೊಡಬೇಕು. ಇದಕ್ಕಾಗಿ ಅಧಿಕಾರಿಗಳು ಏನು ಮಾಡಿದ್ದಾರೆ ಎಂದು ಪರಿಶೀಲಿಸುತ್ತೇನೆ. ಬರ ಘೋಷಣೆಗೆ ಸಂಬಂಧಿಸಿದಂತೆ ಯಾವ ರೈತರಿಗೂ, ಯಾವ ತಾಲೂಕಿನ ರೈತರಿಗೂ ಅನ್ಯಾಯವಾಗದಂತೆ ಕ್ರಮವಹಿಸಲಾಗುವುದು. ಈ ಬಗ್ಗೆ ಕಂದಾಯ ಇಲಾಖೆಗೆ ವರದಿ ಒಪ್ಪಿಸಲಾಗುವುದು ಎಂದು ಸಚಿವರು ಇದೆ ವೇಳೆ ಸುದ್ದಿಗಾರರಿಗೆ ತಿಳಿಸಿದರು.

### ಗ್ರಾಮಸ್ಥರಿಂದ ಸ್ವಾಗತ:

ಸಂಪುಟ ದರ್ಜೆ ಸಚಿವರಾದ ಮೇಲೆ ಮೊದಲ ಬಾರಿಗೆ ತವರು ಜಿಲ್ಲೆಗೆ ಆಗಮಿಸಿದ ಸಚಿವರಾದ ಶಿವರಾಜ ತಂಗಡಗಿ ಅವರಿಗೆ ಬಂಡ್ರಾಳ ಹಾಗೂ ಗಡ್ಡಿ ಗ್ರಾಮಸ್ಥರು ಆತ್ಮೀಯ ಸ್ವಾಗತ ಕೋರಿದರು. ಪಟಾಕಿ ಸಿಡಿಸಿ, ಹೂವಿನ ಹಾರ ಹಾಕಿ ಸಂಭ್ರಮಿಸಿದರು.







"ಈ ವೇಳೆ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್ ಅರಸಿದ್ದಿ, ಕೊಪ್ಪಳ ಸಹಾಯಕ ಆಯುಕ್ತರಾದ ಮೆಹಬೂಬ ಜಿಲಾನಿ, ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಗಂಗಾವತಿ ಡಿವೈಎಸ್ಪಿ ಜೆ ಎಸ್ ನ್ಯಾಮಗೌಡರ, ಜಂಟಿ ಕೃಷಿ ನಿರ್ದೇಶಕರಾದ ಕೃಷ್ಣಮೂರ್ತಿ, ಜಂಟಿ ತೋಟಗಾರಿಕಾ ನಿರ್ದೇಶಕರಾದ ಕೃಷ್ಣ ಉಕ್ಕುಂದ, ಮೀನುಗಾರಿಕಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ, ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಯ್ಯ, ಕೆವಿಕೆಯ ರಾಘವೇಂದ್ರ ಯಲಿಗಾರ, ಕೃಷಿ ವಿಸ್ತರಣಾ ಶಿಕ್ಷಣ ಘಟಕದ ಡಾ.ಬದ್ರಿ ಪ್ರಸಾದ, ಗಂಗಾವತಿಯ ಸಹಾಯಕ ಕೃಷಿ ನಿರ್ದೇಶಕರಾದ ಡಾ.ಅಭಿಲಾಷ ಸಿ ಸೇರಿದಂತೆ ಇತರರು ಇದ್ದರು.

## ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ಮನವಿ

ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಕರ್ನಾಟಕದಲ್ಲಿ ಭೇಟಿ ನೀಡಿದ ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದ್ದು ಅದರಂತೆಯೇ ಜಿಲ್ಲೆಯ ಭಾನಾಪುರ ರೈಲು ನಿಲ್ದಾಣದಲ್ಲಿಯೂ ಈ ಸ್ತಂಭ ನಿರ್ಮಿಸಬೇಕು ಎಂದು ಕೊಪ್ಪಳದ ಗಾಂಧಿ ಬಳಗ ಮನವಿ ಮಾಡಿದೆ. ಈ ಕುರಿತು ಜಿಲ್ಲಾಧಿಕಾರಿಗೆ ಬರೆದ ಮನವಿಯನ್ನು ಬುಧವಾರ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಸಲ್ಲಿಸಲಾಗಿದೆ.

ಭಾನಾಪುರ ರೈಲು ನಿಲ್ದಾಣಕ್ಕೆ 1934 ಮಾರ್ಚ್ 3ರಂದು ಗಾಂಧೀಜಿ ಭೇಟಿ ನೀಡಿದ್ದು ಐತಿಹಾಸಿಕ ಸಂಗತಿಯಾಗಿದೆ. ಹರಿಜನರ ಉದ್ಧಾರಕ್ಕಾಗಿ ನಿಧಿ ಸಂಗ್ರಹಿಸಲು ಬಂದಾಗ ಭಾನಾಪುರದ ಕಾಳಪ್ಪ ಪತ್ತಾರ ಅವರು ಸ್ಥಳದಲ್ಲಿಯೇ ಗಾಂಧೀಜಿಯವರ ಚಿತ್ರವನ್ನು ಬಿಡಿಸಿ ಹರಾಜು ಮಾಡಿದ ಹಣವನ್ನೇ ನಿಧಿಯಾಗಿ ಗಾಂಧೀಜಿಯವರಿಗೆ ನೀಡಿದ್ದರು. ಈ ಘಟನೆ ಐತಿಹಾಸಿಕವಾಗಿದೆ. ಆದ್ದರಿಂದ ಭಾನಾಪುರದಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ಕ್ರಮ ವಹಿಸಬೇಕು ಎಂದು ಮನವಿಯಲ್ಲಿ ಹೇಳಿದ್ದಾರೆ. ಗಾಂಧಿ ಬಳಗದ ಪದಾಧಿಕಾರಿಗಳಾದ ಬಸವರಾಜ ಸವಡಿ, ಪ್ರಭುರಾಜ ನಾಯಕ, ಪ್ರಕಾಶಗೌಡ, ಸಾವಿತ್ರಿ ಮುಜುಮದಾರ, ಶಿವರಾಯ, ಶಿವಪ್ಪ ಹಡಪದ, ಮಲ್ಲಪ್ಪ ಹವಳಿ, ಮೈಲಾರಪ್ಪ, ಪ್ರಾಣೇಶ ಪೂಜಾರ, ಪರಮೇಶರಡ್ಡಿ ಸೇರಿದಂತೆ ಅನೇಕರು ಇದ್ದರು.

## ಕೊಪ್ಪಳ ವಿಶ್ವವಿದ್ಯಾಲಯ: ತಾತ್ಕಾಲಿಕ ಹುದ್ದೆಗಳ ನೇಮಕಾತಿಗಾಗಿ ನೇರ ಸಂದರ್ಶನ ಆ. 6ಕ್ಕೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕೊಪ್ಪಳ ವಿಶ್ವವಿದ್ಯಾಲಯದ ವತಿಯಿಂದ ಗೌರವಧನ ಆಧಾರದ ಮೇಲೆ ಅತಿಥಿ ಸಹಾಯಕ ಗ್ರಂಥಪಾಲಕರು ಹಾಗೂ ತಾಂತ್ರಿಕ ಸಹಾಯಕರ ತಾತ್ಕಾಲಿಕ ಹುದ್ದೆಗಳ ನೇಮಕಾತಿಗಾಗಿ ನೇರ ಸಂದರ್ಶನ ಏರ್ಪಡಿಸಲಾಗಿದೆ.**

ಗೌರವಧನ ಆಧಾರದ ಮೇಲೆ 2 ಅತಿಥಿ ಸಹಾಯಕ ಗ್ರಂಥಪಾಲಕರು ಹಾಗೂ 1 ತಾಂತ್ರಿಕ ಸಹಾಯಕ ಗ್ರಂಥಪಾಲಕರ ತಾತ್ಕಾಲಿಕ ಹುದ್ದೆಗಳಿಗೆ ಆಗಸ್ಟ್ 6 ರ ಗುರುವಾರದಂದು ಬೆಳಗ್ಗೆ 11.30 ಗಂಟೆಗೆ ನೇರ ಸಂದರ್ಶನವನ್ನು ಏರ್ಪಡಿಸಲಾಗಿದ್ದು, ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಒಂದು ನಕಲು ಪ್ರತಿಯನ್ನು ನಿಗದಿತ ಸಮಯಕ್ಕೆ ಹಾಜರಾಗಬೇಕು. ಹುದ್ದೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.koppaluniversity.ac.in ಅನ್ನು ವೀಕ್ಷಿಸಬಹುದು. ಸಂದರ್ಶನಕ್ಕಾಗಿ ಹಾಜರಾಗುವ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ ಎಂದು ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ: ಫಲಾನುಭವಿಗಳಿಂದ ಅರ್ಜಿ ಆಹ್ವಾನ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಮೀನುಗಾರಿಕೆ ಇಲಾಖೆಯಿಂದ 2026-27ನೇ ಸಾಲಿನ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ(ಪಿಎಂಎಂಎಸ್‌ವೈ) ಅಡಿಯಲ್ಲಿ ಮತ್ಸ ಯ ವಾಹಿನಿ ಯೋಜನೆ ಮೂಲಕ ಕಿಂಯೋಸ್ಕ್ ವಾಹನಗಳನ್ನು ಪಡೆಯಲು ಕುಷ್ಟಗಿ/ಗಂಗಾವತಿ, ಕನಕಗಿರಿ ಹಾಗೂ ಕಾರಟಗಿ ತಾಲೂಕುಗಳ ಮೀನುಗಾರರ ಸಹಕಾರ ಸಂಘಗಳ ಸದಸ್ಯರು, ವೃತ್ತಿಪರ ಮೀನುಗಾರರು ಹಾಗೂ ಆಸಕ್ತ ಮೀನುಕೃಷಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

ಈ ಯೋಜನೆಯ ಸೌಲಭ್ಯ ಪಡೆಯಲು ಆಸಕ್ತ ಮೀನುಗಾರರು/ಮೀನುಕೃಷಿಕರು ಅಗಸ್ಟ್ 25 ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದು. ನಿಗದಿಪಡಿಸಿರುವ ಗುರಿಗಳಿಗೆ ಅನುಗುಣವಾಗಿ ಮತ್ತು ಸರ್ಕಾರದ ಷರತ್ತು ಹಾಗೂ ನಿಯಮಗಳ ಅನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ಗಂಗಾವತಿ/ಕುಷ್ಟಗಿ ಕಛೇರಿಗೆ ಸಂಪರ್ಕಿಸುವಂತೆ ಗಂಗಾವತಿ ಮೀನುಗಾರಿಕೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ಮನವಿ

ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಕರ್ನಾಟಕದಲ್ಲಿ ಭೇಟಿ ನೀಡಿದ ಸ್ಥಳಗಳಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದ್ದು ಅದರಂತೆಯೇ ಜಿಲ್ಲೆಯ ಭಾನಾಪುರ ರೈಲು ನಿಲ್ದಾಣದಲ್ಲಿಯೂ ಈ ಸ್ತಂಭ ನಿರ್ಮಿಸಬೇಕು ಎಂದು ಕೊಪ್ಪಳದ ಗಾಂಧಿ ಬಳಗ ಮನವಿ ಮಾಡಿದೆ.



ಈ ಕುರಿತು ಜಿಲ್ಲಾಧಿಕಾರಿಗೆ ಬರೆದ ಮನವಿಯನ್ನು ಬುಧವಾರ ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಸಲ್ಲಿಸಲಾಗಿದೆ.

ಭಾನಾಪುರ ರೈಲು ನಿಲ್ದಾಣಕ್ಕೆ 1934 ಮಾರ್ಚ್ 3ರಂದು ಗಾಂಧೀಜಿ ಭೇಟಿ ನೀಡಿದ್ದು ಐತಿಹಾಸಿಕ ಸಂಗತಿಯಾಗಿದೆ. ಹರಿಜನರ ಉದ್ಧಾರಕ್ಕಾಗಿ ನಿಧಿ ಸಂಗ್ರಹಿಸಲು ಬಂದಾಗ ಭಾನಾಪುರದ ಕಾಳಪ್ಪ ಪತ್ತಾರ ಅವರು ಸ್ಥಳದಲ್ಲಿಯೇ ಗಾಂಧೀಜಿಯವರ ಚಿತ್ರವನ್ನು ಬಿಡಿಸಿ ಹರಾಜು ಮಾಡಿದ ಹಣವನ್ನೇ ನಿಧಿಯಾಗಿ ಗಾಂಧೀಜಿಯವರಿಗೆ ನೀಡಿದ್ದರು. ಈ ಘಟನೆ ಐತಿಹಾಸಿಕವಾಗಿದೆ. ಆದ್ದರಿಂದ ಭಾನಾಪುರದಲ್ಲಿ ಗಾಂಧಿ ಸ್ಮಾರಕ ಸ್ತಂಭ ನಿರ್ಮಿಸಲು ಕ್ರಮ ವಹಿಸಬೇಕು ಎಂದು ಮನವಿಯಲ್ಲಿ ಹೇಳಿದ್ದಾರೆ. ಗಾಂಧಿ ಬಳಗದ ಪದಾಧಿಕಾರಿಗಳಾದ ಬಸವರಾಜ ಸವಡಿ, ಪ್ರಭುರಾಜ ನಾಯಕ, ಪ್ರಕಾಶಗೌಡ, ಸಾವಿತ್ರಿ ಮುಜುಮದಾರ, ಶಿವರಾಯ, ಶಿವಪ್ಪ ಹಡಪದ, ಮಲ್ಲಪ್ಪ ಹವಳಿ, ಮೈಲಾರಪ್ಪ, ಪ್ರಾಣೇಶ ಪೂಜಾರ, ಪರಮೇಶರಡ್ಡಿ ಸೇರಿದಂತೆ ಅನೇಕರು ಇದ್ದರು.

## ಸಚಿವ ತಂಗಡಗಿಗೆ ಅದ್ದೂರಿ ಸ್ವಾಗತ: ಶ್ಯಾಮೀದ್ ಮನಿಯರ್ ನೇತೃತ್ವದಲ್ಲಿ ಸಾವಿರಾರು ಕಾರ್ಯಕರ್ತರಿಂದ ಬೈಕ್ ರ್ಯಾಲಿ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಕರ್ನಾಟಕ ರಾಜ್ಯದ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಸನ್ಮಾನ್ಯ ಎಸ್. ಶಿವರಾಜ ತಂಗಡಗಿ ಅವರಿಗೆ ಗಂಗಾವತಿ ನಗರದಲ್ಲಿ ಮಾಜಿ ನಗರಸಭೆ ಸದಸ್ಯರು ಹಾಗೂ ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶಾಮೀದ್ ಮನಿಯರ್ ಅವರ ಅಭಿಮಾನಿಗಳು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.**

ಸಚಿವರ ಆಗಮನದ ಹಿನ್ನೆಲೆಯಲ್ಲಿ ಗಂಗಾವತಿ ನಗರದಲ್ಲಿ ನೂರಾರು ಬೈಕ್‌ಗಳೊಂದಿಗೆ ಬೃಹತ್ ಬೈಕ್ ರ್ಯಾಲಿ ಆಯೋಜಿಸಲಾಯಿತು. ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉತ್ಸಾಹದಿಂದ ಪಾಲ್ಗೊಂಡು ಸಚಿವ ಶಿವರಾಜ ತಂಗಡಗಿ ಅವರಿಗೆ ಜಯಘೋಷಗಳೊಂದಿಗೆ ಭವ್ಯ ಸ್ವಾಗತ ನೀಡಿದರು. ಗಂಗಾವತಿ ನಗರದಿಂದ ಆರಂಭವಾದ ಬೈಕ್



ರ್ಯಾಲಿಯು ವಿವಿಧ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಬಳಿಕ ಕರ್ನೂಲ್ ದರ್ಗಾಕ್ಕೆ ಬೇಟೆ ನೀಡಿ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು, ಯುವ ಕಾರ್ಯಕರ್ತರು ಹಾಗೂ ಅಪಾರ ಸಂಖ್ಯೆಯ ಸಾರ್ವಜನಿಕರು ಉಪಸ್ಥಿತರಿದ್ದು, ಸಚಿವರಿಗೆ ಹೂಮಾಲೆ ಹಾಕಿ ಶುಭಾಶಯ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಮೀದ್ ಮನಿಯರ್, "ಶಿವರಾಜ ತಂಗಡಗಿ ಅವರಿಗೆ ಸಚಿವ ಸ್ಥಾನ ದೊರೆತಿರುವುದು ಕೊಪ್ಪಳ ಜಿಲ್ಲೆ ಹಾಗೂ ಗಂಗಾವತಿ ಭಾಗದ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ. ಅವರ ಸಚಿವ ಸಂಪುಟದ ಅವಧಿಯಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ ಎಂಬ ವಿಶ್ವಾಸವಿದೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಜಿ ನಗರಸಭೆ ಸದಸ್ಯ ಸೋಮನಾಥ ಬಂಡಾರಿ, ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಮಲ್ಲೇಶ ದೇವರಮನಿ,ಆಸೀಫ್, ಸೇರಿದಂತೆ ಇತರರು ಇದ್ದರು.

## ಡಾ. ಮಲ್ಲಯ್ಯ ಇವರಿಂದ ಕುರಿ, ಮೇಕೆಗಳಿಗೆ ಉಚಿತ ಜಂತು ನಾಶಕ ಔಷಧಿ ವಿತರಣೆ ಕಾರ್ಯಕ್ರಮ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಪಶುಸಂಗೋಪನಾ ಕ್ಷೇತ್ರದಲ್ಲಿ ಕುರಿ ಹಾಗೂ ಮೇಕೆಗಳ ಆರೋಗ್ಯ ಸಂರಕ್ಷಣೆಗೆ ಒತ್ತು ನೀಡುವ ಉದ್ದೇಶದಿಂದ ಪಶು ಸಂಗೋಪನೆ ಇಲಾಖೆ ವತಿಯಿಂದ ಉಚಿತ ಜಂತು ನಾಶಕ ಫ(ಡಿ ವರ್ಮಿಂಗ್) ಔಷಧಿ ವಿತರಣೆ ಕಾರ್ಯಕ್ರಮವನ್ನು ಮಂಗಳವಾರ ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.**

ಪಶು ಸಂಗೋಪನೆ ಇಲಾಖೆ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಕೊಪ್ಪಳ ಹಾಗೂ ಶ್ರೀ ಬೀರಲಿಂಗೇಶ್ವರ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸರ್ಕಾರದ ಪಶು ಸಂಗೋಪನೆ ಇಲಾಖೆಯ



ಆಡಳಿತ ವಿಭಾಗದ ಉಪನಿರ್ದೇಶಕ ಡಾ. ಮಲ್ಲಯ್ಯ ಅವರು ಕುರಿ ಮತ್ತು ಮೇಕೆಗಳಿಗೆ ಉಚಿತ ಜಂತು ನಾಶಕ ಔಷಧಿಯನ್ನು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಡಾ. ಮಲ್ಲಯ್ಯ, ಕುರಿ ಮತ್ತು ಮೇಕೆಗಳಲ್ಲಿ ಕಂಡುಬರುವ ಆಂತರಿಕ ಜಂತುಗಳು ಅವುಗಳ ಬೆಳವಣಿಗೆ, ಆರೋಗ್ಯ ಹಾಗೂ ಉತ್ಪಾದಕತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

ಆದ್ದರಿಂದ ಪಶುಪಾಲಕರು ಇಲಾಖೆಯು ನೀಡುತ್ತಿರುವ ಉಚಿತ ಜಂತು ನಾಶಕ ಔಷಧಿಗಳನ್ನು ನಿಯಮಿತವಾಗಿ ಬಳಸಿಕೊಂಡು ತಮ್ಮ ಸಾಕುಪ್ರಾಣಿಗಳ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸರ್ಕಾರದ ವಿವಿಧ ಪಶು ಕಲ್ಯಾಣ ಯೋಜನೆಗಳ ಸದುಪಯೋಗವನ್ನು ಪಡೆದು ಆರ್ಥಿಕವಾಗಿ ಸದೃಢರಾಗುವಂತೆ ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪಶು ಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಆನಂದ ದೇವರನಾವದಗಿ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ಕೊಪ್ಪಳದ ಸಹಾಯಕ ನಿರ್ದೇಶಕ ಡಾ. ವಿನೋದ್ ಡಿವಟರ್, ಹಿರೇ ಪಶುವೈದ್ಯಕೀಯ ಆಸ್ಪತ್ರೆ, ಕಿನ್ನಾಳದ ಡಾ. ನಾಗರಾಜ್ ಕಲಾಲ್, ಕಿನ್ನಾಳ ಗ್ರಾಮ ಪಂಚಾಯಿತಿ ಪಿಡಿಒ ಪರಮೇಶ್ವರಯ್ಯ ತಳಗಡೇಮಠ ಉಪಸ್ಥಿತರಿದ್ದರು. ಇದೇ ವೇಳೆ ಶ್ರೀ ಬೀರಲಿಂಗೇಶ್ವರ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಹಾಗೂ ಕಿನ್ನಾಳ ಗ್ರಾಮದ ಮುಖಂಡ ರಾಘವೇಂದ್ರ ಡಂಬಳ, ಉಪಾಧ್ಯಕ್ಷ ಯಮನೂರಪ್ಪ ಲ್ಯಾವಕ್ಕಿ, ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇಲಾಖೆಯ ಈ ಜನಪರ ಯೋಜನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

# ವಿಪ್ರಸಿರಿ ಸೌಹಾರ್ದ ಸಹಕಾರ ಸಂಘದ 7ನೇ ವಾರ್ಷಿಕ ಮಹಾಸಭೆ

## ಸಂಘದಿಂದ 17.88 ಲಕ್ಷ ರೂ. ನಿವ್ವಳ ಲಾಭ ದಾಖಲು : ಜಿ.ಶ್ರೀಧರ ಕೆಸರಹಟ್ಟಿ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ವಿಪ್ರಸಿರಿ ಸೌಹಾರ್ದ ಸಹಕಾರ ಸಂಘವು 2025-26 ನೇ ಸಾಲಿನಲ್ಲಿ ಒಟ್ಟು 17 ಲಕ್ಷ 88 ಸಾವಿರ ರೂ.ಗಳ ನಿವ್ವಳ ಲಾಭಾಂಶವನ್ನು ಗಳಿಸುವ ಮೂಲಕ ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಕರ್ನಾಟಕ ರಾಜ್ಯ ಸಹಕಾರಿ ನಿರ್ದೇಶಕ ಜಿ. ಶ್ರೀಧರ ಕೆಸರಹಟ್ಟಿ ತಿಳಿಸಿದರು.? ಅವರು ಬುಧವಾರ ನಗರದ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಪ್ರಸಿರಿ ಸೌಹಾರ್ದ ಸಹಕಾರ ಸಂಘದ 7ನೇ ವಾರ್ಷಿಕ ಮಹಾಸಭೆಯನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.**

ಪಾರದರ್ಶಕ ಆಡಳಿತಕ್ಕೆ ಮೆಚ್ಚುಗೆ ಕೊಪ್ಪಳ ಜಿಲ್ಲೆಯಲ್ಲಿ ಹಲವು ಸಹಕಾರಿ ಸಂಘಗಳಿದ್ದರು, ಅವುಗಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪಾತ್ರ




ಹಿರಿದಾದದ್ದು. ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಸಹಕಾರಿ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಪ್ರಸಿರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ರಂಗನಾಥ ವಟಗಲ್ ಪ್ರಥಮ ಸ್ಥಾನ ಪಡೆದಿರುವುದು ಸಂಘದ ಪಾರದರ್ಶಕ ಆಡಳಿತಕ್ಕೆ ಹಿಡಿದ ಕನ್ನಡಿಯಾಗಿದೆ ಎಂದು ಪ್ರಶಂಸಿಸಿದರು.

ಕಿರು ಸಾಲ ಪದ್ಧತಿಗೆ ಒತ್ತು ನೀಡಲು ಕರೆ,, ಸಂಘದ ಗೌರವಾಧ್ಯಕ್ಷ ನಾರಾಯಣ ರಾವ್ ವೈದ್ಯ ಮಾತನಾಡಿ, 30 ಕೋಟಿ ರೂ.ಗಳಿಗೂ ಅಧಿಕ ವ್ಯವಹಾರ ನಡೆಸಿರುವ ವಿಪ್ರಸಿರಿ ಸಂಘವು ಗ್ರಾಹಕರಿಗೆ ಕಿರು ಸಾಲ ಪದ್ಧತಿಯನ್ನು ಅನುಸರಿಸುವ ಮೂಲಕ ಹೆಚ್ಚಿನ ಅಭಿವೃದ್ಧಿ ಸಾಧಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಷೇರುದಾರರನ್ನು ಮತ್ತು ಠೇವಣಿದಾರರನ್ನು ಸೆಳೆಯುವ ಮೂಲಕ ಸಹಕಾರಿ ಕಾನೂನಿನ ಅನ್ವಯ ಕಾರ್ಯಪ್ರವೃತ್ತರಾಗಲು ಕರೆ ನೀಡಿದರು.

2422 ಸದಸ್ಯರ ಬಲ ಸಂಘದ ಅಧ್ಯಕ್ಷ ರಾಘವೇಂದ್ರ ಮೇಗೂರು ವಾರ್ಷಿಕ ವರದಿ ವಾಚಿಸಿ ಮಾತನಾಡಿ, ಗ್ರಾಹಕರ ಸೇವೆ ನಿಜವಾದ ಸೇವೆ ಎಂಬ ಧ್ಯೇಯದೊಂದಿಗೆ ಸಮಾಜದ ಎಲ್ಲಾ ವರ್ಗದವರಿಗೆ ಕೃಷಿ ಸಾಲ, ಶೈಕ್ಷಣಿಕ ಸಾಲ, ಚಿನ್ನಾಭರಣ ಮೇಲಿನ ಸಾಲ ಸೇರಿದಂತೆ ವಿವಿಧ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಗ್ರಾಹಕರಿಂದ ಸಕಾಲಕ್ಕೆ ಸಾಲ ವಸೂಲಾತಿಗಾಗಿ 8ಕ್ಕೂ ಅಧಿಕ ಪಿಗ್ಮಿ ಏಜೆಂಟರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ 2026-27ನೇ ಸಾಲಿಗೆ ಸಂಘದಲ್ಲಿ ಒಟ್ಟು 2422 ಜನ ಸದಸ್ಯರಿದ್ದು, ಮುಂದಿನ ದಿನಗಳಲ್ಲಿ ಸದಸ್ಯರ ಸಂಖ್ಯೆಯನ್ನು ಮತ್ತಷ್ಟು ವಿಸ್ತರಿಸಲಾಗುವುದು ಎಂದರು.

ಗೌರವ ಸನ್ಮಾನ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಾಯತ್ರಿ ಅವರನ್ನು ಈ ಸಂದರ್ಭದಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಗುರುರಾಜ ಚಿಚ್ಚನಗುಡ್ಡ, ನಿರ್ದೇಶಕರಾದ ರಮೇಶ ಕುಲಕರ್ಣಿ, ಮುರುಳಿಧರ ಗಂಗನಾಳ, ಹಿರಿಯರಾದ ಪ್ರಾಣೇಶ ಅಂತರಗಂಗೆ ಸೇರಿದಂತೆ ನಿರ್ದೇಶಕರು, ಹಾಗೂ ನೌಕರ ವರ್ಗದವರು ಇತರರು ಉಪಸ್ಥಿತರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

AFFIDAVIT



I am a serving Defence Force person of Gs-184698 Y SA SHIVARAJ General Reserve Engineer Force (GREF) (Border Roads Organization), an integral part of Indian Army. I have joined the Defence Force on 09 May 2002. Name of my son has been entered as PRAJVAL (Date of Birth is 17 January 2007) in my Service Records. In all other official records, name of my son is

mentioned as PRAJWAL NAIK.

It is confirmed that the above mentioned names PRAJVAL and PRAJWAL NAIK belongs to one and same person who is my son and there is no other person in either of these names entered in my Service Records or any other official records.

Date: 06.08.2026.

Place: GINIGERA.
(Koppal.) DEPONENT

SHIVARAJ NAIK.

# ಕೋಟಿ ಸಂಪತ್ತುಗಿಂತ ಆರೋಗ್ಯ ಸಂಪತ್ತು ಮುಖ್ಯ :ಶರಣಬಸಪ್ಪ ದಾನಕ್ಕೈ



ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಬೀಡಿ, ಸಿಗರೇಟ್, ಡ್ರಗ್ಸ್ ಇತರ ಮಾದಕ ವಸ್ತುಗಳ ದುಶ್ಚಟಗಳಿಗೆ ಯುವ ಸಮುದಾಯ ,ಸೇವನೆಗೆ ಅಂಟಿಕೊಂಡು ದಾಸರಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಂಡಿದ್ದಾರೆ, ದುಶ್ಚಟಗಳಿಂದ ದೂರವಿದ್ದು ಉತ್ತಮ ಆರೋಗ್ಯ, ಭವಿಷ್ಯವನ್ನು ರೂಪಿಸಿಕೊಳ್ಳಿ ,ಕೋಟಿ ಸಂಪತ್ತುಗಿಂತ ಆರೋಗ್ಯ ಸಂಪತ್ತು ಮುಖ್ಯವಾದದು ಎಂದು ಅಖಿಲ ಕರ್ನಾಟಕ ಕೊಪ್ಪಳ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಶರಣಬಸಪ್ಪ. ಕೆ.ದಾನಕ್ಕೈ ಹೇಳಿದರು.**

ಅವರು ಯಲಬುರ್ಗಾದ ಮೌಲಾನ ಆಜಾದ ಶಾಲೆಯಲ್ಲ ಸ್ವಾಸ್ಥ ಸಂಕಲ್ಪ ಕಾರ್ಯಕ್ರಮ ಅಂಗವಾಗಿ ದೀಪ ಬೆಳಗಿಸಿ ಚಾಲನೆ ನೀಡಿ ಮಾತನಾಡಿದರು. ನಂತರ ಡಾ.ಶೇಖರ ಭಜಂತ್ರಿ ಅವರು ಮಾತನಾಡಿ ಅಮಲು ಬರುವಂತಹ ಮಾದಕ ಸೇವನೆ ಮಾಡುವದರಿಂದ ದೈಹಿಕವಾಗಿ, ಮಾನಸಿಕವಾಗಿ ಅನೇಕ ಕಾಯಿಲೆಗಳಿಗೆ ಒಳಗಾಗಿ ತಮ್ಮ ಜೀವನವನ್ನು ಕಳೆದುಕೊಳ್ಳುವದು ಬೇಡ ಉತ್ತಮರ ಸಹವಾಸ ಮಾಡಿ ಸರಿ ದಾರಿಯಲ್ಲಿ ಸಾಗಬೇಕು ಎಂದು ಹೇಳಿದರು. ಈ ವೇಳೆ ಮೌಲಾನ ಆಜಾದ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ಶಿಲ್ಪಾ ಕೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ಯುವಕರ ಭವಿಷ್ಯ ಮತ್ತು ಜೀವನ ಹಾಳಾಗುತ್ತಿದೆ ಮತ್ತು ಕುಟುಂಬಗಳು ಬೀದಿಗೆ ಬಂದಿರುವ ಘಟನೆಗಳನ್ನು ಕಾಣಬಹುದು, ಉತ್ತಮ ವಿದ್ಯಾಭ್ಯಾಸದ ಜೊತೆಗೆ ಮೂಲಕ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಮೇಲ್ವಿಚಾರಕಿ ಕಾವ್ಯ ಸಿರಿಗೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಸೇವಾ ಪ್ರತಿನಿದಿ ಶಿಲ್ಪಾ ಮತ್ತು ಶಾಲೆಯ ಶಿಕ್ಷಕರಾದ ಬಾಳಪ್ಪ ಹಡಪದ ,ಶಿವಪ್ಪ ದಿವಟರ ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಡಾ. ಸತೀಶ ತಿವಾರಿ ಗೆ 'ಹೆಲ್ತ್ ಕೇರ್ ಎಕ್ಸಲೆನ್ಸ್ ಅವಾರ್ಡ್'

ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ನೀಡುವ 'ಹೆಲ್ತ್ ಕೇರ್ ಎಕ್ಸಲೆನ್ಸ್ ಅವಾರ್ಡ್ 2026' ಪ್ರಶಸ್ತಿ ಪಡೆದ ತಾಲೂಕು ಆರೋಗ್ಯಾಧಿಕಾರಿ ಡಾ. ಸತೀಶ ತಿವಾರಿ ಅವರನ್ನು ತಾಲೂಕಿನ ಆರೋಗ್ಯ ಇಲಾಖೆ ನೌಕರರು ಹಾಗೂ ಆನಂದಗೌಡರ ಗೆಳೆಯರ ಬಳಗದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**

ಈ ಸಂದರ್ಭದಲ್ಲಿ ವಿಜಯಪುರ ಜಿ.ಓ.ಸಿ.ಸಿ. ಬ್ಯಾಂಕ್ ನಿರ್ದೇಶಕ ಆನಂದಗೌಡ ಬಿರಾದಾರ ಮಾತನಾಡಿ, "ಡಾ. ಸತೀಶ ತಿವಾರಿ ಅವರ ನಿಸ್ವಾರ್ಥ ಸೇವೆ ಹಾಗೂ ಕರ್ತವ್ಯನಿಷ್ಠೆಗೆ ಈ ಪ್ರಶಸ್ತಿ ದೊರೆತಿರುವುದು ಇಡೀ ತಾಲೂಕಿಗೆ ಹೆಮ್ಮೆ. ಅವರಿಂದ ಮುಂದೆಯೂ ಉತ್ತಮ ಜನಸೇವೆ ಮೂಡಿಬರಲಿ" ಎಂದು ಶುಭ ಹಾರೈಸಿದರು.





ಕಾರ್ಯಕ್ರಮದಲ್ಲಿ ?ವೈದ್ಯರುಗಳಾದ ಡಾ. ವಿಜಯಕುಮಾರ ಕಟಕದೊಂಡ, ಡಾ. ಬಸವರಾಜ್ ಅಲಗೂರ, ಡಾ. ಚೇತನ್ ಬಾಗೇವಾಡಿ, ಡಾ. ಸಂದೀಪ್ ಬಿರಾದಾರ, ಡಾ. ಫೈಜಲ್, ಡಾ. ಅಕ್ಷಯ್ ತಾಳಿಕೋಟಿ. ?ಸಿಬ್ಬಂದಿ ಹಾಗೂ ಗಣ್ಯರಾದ ಬಿ. ಎಸ್. ಶಿವಯೋಗಿಮಠ, ಹಣಮಗೌಡ ಬಿರಾದಾರ, ಯಲ್ಲಪ್ಪ ಚಲವಾದಿ, ವಿಠ್ಠಲ ಕಿಲಾರಟ್ಟಿ, ಎಸ್. ಎಸ್. ಮಾಗಿ, ಎಸ್. ಸಿ. ರುದ್ರವಾಡಿ, ಬಸವರಾಜ್ ಗೊಲಬಾವಿ, ಅನುಸೂಯಾ ತೇರದಾಳ, ಟಿ. ಎಚ್. ಲಮಾಣಿ, ಎಸ್. ಬಿ. ಲಮಾಣಿ, ಪಿ. ಶಾಸ್ತ್ರೀ (ಎಫ್‌ಡಿಎ), ಕೊಡಗಾನೂರ, ಎಂ. ಎ. ಟಪಾಲ, ಬಸವರಾಜ್ ಚಿಕ್ಕಬೆವನೂರ, ಸಂಗು ಕೊಪ್ಪದ, ಶಿವರಾಜ್ ಪಾಟೀಲ, ಚೇತನ್ ಕಲ್ಲುಂಡಿ, ಪ್ರವೀಣ್ ಬಿದರಿ, ವೀರೇಶ, ಇಸ್ಮಾಯಿಲ್ ವಾಲಿಕಾರ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು. ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಎಸ್. ಗೌಡರ ಕಾರ್ಯಕ್ರಮ ನಿರೂಪಿಸಿದರು.

## 'ವಚನಾಮೃತ'

ಗಳಿತ ಮನದೊಡಲೊಳ್
ಧ್ಯಾನವೆಂಬೊ ಕಡಗೊಲಾಡಿಸಿ
ಒಮ್ಮೆಯಾದರೂ ಪರಂಬರಿಸಿ
ನೋಡಾ! ಬೆಣ್ಣೆಯೇ ನೀನಾಗಿ
ಘಮಗುಡುವ ತುಪ್ಪವೆಂತಾಗಿ
ಘಮಿಸಿದೊಡೆ ಮೃಡನ
ಕೃಪೆಗಾಗುಹುದು ಈ ಜೀವ
ಸತ್ಯವಾಣಿ!!.



ವಾಣಿ ಭಂಡಾರಿ.

# ವಿದ್ಯಾರ್ಥಿ ಒಕ್ಕೂಟಕ್ಕೆ ಚುನಾವಣೆ ಮೂಲಕ ಆಯ್ಕೆ



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘದ ಕಲ್ಮಠ ಶ್ರೀ ಚನ್ನಬಸವ ಸ್ವಾಮಿ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ 2026 -27 ನೇ ಸಾಲಿನ ವಿದ್ಯಾರ್ಥಿ ಒಕ್ಕೂಟ ಒಕ್ಕೂಟಕ್ಕೆ ಚುನಾವಣೆಯ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಿತು.**

ಕಾಲೇಜಿನ ಪ್ರಧಾನ ಕಾರ್ಯದರ್ಶಿಯಾಗಿ ಬಿ.ಕಾಂ ಅಂತಿಮ ವರ್ಷದ ರೇಣುಕಾ ಮತ್ತು ಸಹ ಕಾರ್ಯದರ್ಶಿಯಾಗಿ ಬಿ.ಎ ಅಂತಿಮ ವರ್ಷದ ಫರೀನಾ ಬಹುಮತಗಳ ಮೂಲಕ ಆಯ್ಕೆಯಾದರು. ಇದೇ ಸಂದರ್ಭದಲ್ಲಿ ಮಹಿಳಾ ಅಧ್ಯಯನ ವೇದಿಕೆ ಕಾರ್ಯದರ್ಶಿಯಾಗಿ ಬಿ.ಎ ಅಂತಿಮ ವರ್ಗದ ನೌಶಿನ್, ವ್ಯಕ್ತಿತ್ವ ವಿಕಸನ ವೇದಿಕೆ ಕಾರ್ಯದರ್ಶಿಯಾಗಿ ಬಿ.ಕಾಂ ಅಂತಿಮ ವರ್ಗದ ರಂಜಿತ, ಲಲಿತ ಕಲಾವೇದಿಕೆ ಕಾರ್ಯದರ್ಶಿಯಾಗಿ ಬಿ.ಎ ಅಂತಿಮ ವರ್ಗದ ಗಾಯತ್ರಿ, ಕ್ರೀಡೆ -ಯೋಗ ವೇದಿಕೆ ಕಾರ್ಯದರ್ಶಿಯಾಗಿ ಅಖಿಲಾ ಆಯ್ಕೆಯಾದರು. ಇದೇ ಸಂದರ್ಭದಲ್ಲಿ ವಿವಿಧ ತರಗತಿ ಪ್ರತಿನಿಧಿಗಳ ಆಯ್ಕೆ ನಡೆಯಿತು. ಬಿ.ಎ ಪ್ರಥ'ಮ ವರ್ಗಕ್ಕೆ ಭೀಮಮ್ಮ, ಪ್ರೇಮ, ಭೂಮಿಕ ,ಅಖಿಲ ದ್ವಿತೀಯ ವರ್ಗಕ್ಕೆ ಸಮ್ರೀನ್, ಅನುರಾಧ, ಪವಿತ್ರ ,ಅನಿಫ್ ಬಾನು, ಬಿ.ಕಾಂ ಪ್ರಥಮ ವರ್ಗಕ್ಕೆ ಪವಿತ್ರ, ಸುಪ್ರಿಯ, ದಿವ್ಯಶ್ರೀ ,ಶಹೀದ್ ಮತ್ತು ಬಿ.ಕಾಂ ದ್ವಿತೀಯ ವರ್ಗಕ್ಕೆ ಅಂಬಿಕಾ, ಶಶಿಕಲಾ, ಮುಸ್ಕಾನ್ ಮತ್ತು ಟಿ. ರಶ್ಮಿ ಚುನಾಯಿತರಾದರು.

ಮಹಾವಿದ್ಯಾಲಯದ ಉಪನ್ಯಾಸಕ ಸಿಬ್ಬಂದಿ ವರ್ಗ ಚುನಾವಣಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಶರಣಬಸಪ್ಪ ಕೋಲ್ಕಾರ್, ಉಪ ಪ್ರಾಚಾರ್ಯ ಡಾ. ಕೆ. ಎಂ. ಬಸವರಾಜ್, ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ.ಜರೀನಾ ಚುನಾವಣಾ ಅಧಿಕಾರಿಗಳಾಗಿ ಮಾರ್ಗದರ್ಶನ ಮಾಡಿದರು.

# ವಿಬಿ ಜೀ ರಾಮ್‌ಜೀ ಯೋಜನೆಯಿಂದ ಗ್ರಾಮದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ: ಸಹಾಯಕ ನಿರ್ದೇಶಕ ಮಹೇಶ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಗ್ರಾಮೀಣ ಭಾಗದ ರೈತರ, ಕೂಲಿಕಾರರ ಮತ್ತು ಜೀವನೋಪಾಯ ಚಟುವಟಿಕೆಗಳ ಮೂಲಕ ಆರ್ಥಿಕ ಸದೃಢಕ್ಕಾಗಿ ಜಾರಿಯಾದ ವಿಕಸಿತ ಭಾರತ ಜೀ ರಾಮ್‌ಜೀ ಯೋಜನೆಯಿಂದ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯಾಗಲಿದೆ ಎಂದು ಕೊಪ್ಪಳ ತಾಲೂಕ ಪಂಚಾಯತ ಪಂಚಾಯತ್‌ನ ಸಹಾಯಕ ನಿರ್ದೇಶಕ ಮಹೇಶ್ ಹೇಳಿದರು.**

ಬುಧವಾರದಂದು ಕೊಪ್ಪಳ ತಾಲೂಕಿನ ಹಲಗೇರಿ ಗ್ರಾಮ ಪಂಚಾಯತಿ ವತಿಯಿಂದ ಹಲಗೇರಿ ಗ್ರಾಮದ ಭಾರತ ನಿರ್ಮಾಣ ಸೇವಾ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿದ್ದ 2026-27ನೇ ಸಾಲಿನ ವಿಕಸಿತ ಭಾರತ ಜಿರಾಮ್‌ಜೀ ಯೋಜನೆಯ ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ ಕುರಿತು ಜರುಗಿದ ಗ್ರಾಮಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮ ಪಂಚಾಯತ ಹಾಗು ಅನುಷ್ಠಾನ ಇಲಾಖೆಗಳಾದ ತೋಟಗಾರಿಕೆ, ಕೃಷಿ, ಅರಣ್ಯ, ರೇಷ್ಮೆ ಇಲಾಖೆಗಳಿಂದ ಕಾಮಗಾರಿಗಳನ್ನು ಅನುಷ್ಠಾನಿಸಲು ಅವಕಾಶ ಇರುತ್ತದೆ. ರೈತರು ವೈಯಕ್ತಿಕ ಕಾಮಗಾರಿ ಅನುಷ್ಠಾನಿಸಬಹುದು. ರಾಷ್ಟ್ರೀಯ ತೋಟಗಾರಿಕೆ ಇಲಾಖೆಯಿಂದ ಅಲ್ಲಿಯೂ ಕೂಡಾ ಸೌಲಭ್ಯ ದೊರೆಯುತ್ತದೆ ಎಂದು ಮಾಹಿತಿ ನೀಡಿದರು. ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ ಮಾತನಾಡಿ, ವಿಬಿಜಿರಾಮ್ ಜೀ ಯೋಜನೆಯು ಗ್ರಾಮೀಣ ಭಾಗದ ಕೂಲಿಕಾರರು ಗುಳೆ ಹೋಗದಂತೆ ತಡೆದು ಒಂದು ಕುಟುಂಬಕ್ಕೆ ಸ್ಥಳೀಯವಾಗಿ 125 ದಿನಗಳ ಕೂಲಿ ಕೆಲಸ ನೀಡುವ ಉದ್ದೇಶ ಹೊಂದಿದೆ.

ಪುರುಷ-ಮಹಿಳೆಯರಿಗೆ ಸಮಾನ ಕೂಲಿ ನಿಗದಿಪಡಿಸಿದ್ದು ಯೋಜನೆಯ ಮೂಲ ಉದ್ದೇಶಗಳಾದ ಜಲ ಸಂರಕ್ಷಣೆ, ನೀರಾವರಿ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶದ ಅಭಿವೃದ್ಧಿ, ಜಲಮೂಲಗಳ ಪುನಶ್ಚೇತನ ಪ್ರಮುಖ



ಕಾರ್ಯಗಳಿಗೆ ವಿಶೇಷ ಆದ್ಯತೆ ನೀಡಿರುತ್ತದೆ. ವಿಕಸಿತ ಗ್ರಾಮ ಪಂಚಾಯತಿಯಿಂದ ವಿಕಸಿತ ಭಾರತದೆಡೆಗೆ ಎಂಬುದು ಯೋಜನೆಯ ಉದ್ದೇಶವಾಗಿದೆ. ಪ್ರಸಕ್ತದಲ್ಲಿ ಪ್ರತಿ ಮಾನವ ದಿನಕ್ಕೆ ಕೂಲಿ ಹಣ ರೂ.382/- ನಿಗದಿಪಡಿಸಲಾಗಿದ್ದು, ಎಲ್ಲರೂ ಅಳತೆಗೆ ತಕ್ಕಂತೆ ಕೂಲಿ ಕೆಲಸ ನಿರ್ವಹಿಸಿರಿ. ಕೂಲಿ ಹಣವನ್ನು ಅಳತೆಗೆ ಅನುಗುಣವಾಗಿ ಪಾವತಿಸಲಾಗುತ್ತದೆ. 318 ಕಾಮಗಾರಿಗಳಲ್ಲಿ ವೈಯಕ್ತಿಕ ಕಾಮಗಾರಿಗಳಾದ ಜಾನುವಾರು ಶೆಡ್, ಮೇಕೆ ಶೆಡ್, ಕೃಷಿಹೊಂಡ, ಬದು ನಿರ್ಮಾಣ, ಕೋಳಿ ಶೆಡ್ ಇತ್ಯಾದಿ ಕಾಮಗಾರಿಗಳನ್ನು ಮಾಡಿಕೊಳ್ಳಲು ಅವಕಾಶ ಇರುವುದನ್ನು ಬಳಕೆ ಮಾಡಿಕೊಂಡು 125 ದಿನಗಳ ಕೆಲಸ ನಿರ್ವಹಿಸಿರೆಂದು ಕರೆ ನೀಡಿದ ಅವರು,

ಜಮೀನು ಇರದಿದ್ದಲ್ಲಿ ಗ್ರಾಮ ಪಂಚಾಯತಿಯಿಂದ ನೀಡುವ ಸಾಮೂಹಿಕ ಕಾಮಗಾರಿಗಳಲ್ಲಿ ಕೂಲಿ ಕೆಲಸ ನಿರ್ವಹಿಸಿ ಕೂಲಿ ಹಣ ಪಡೆದು ಆರ್ಥಿಕ ಸಬಲರಾಗಬೇಕು. ಹೊಸದಾಗಿ ನೋಂದಣಿಯಾದ ಕುಟುಂಬಗಳಿಗೆ ಗ್ಯಾರಂಟಿ ಕಾರ್ಡಗಳನ್ನು ವಿತರಿಸಲಾಗುತ್ತದೆ ಎಂದರು. ಸಂಜೀವಿನಿ ಯೋಜನೆಯ ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕ ಸುನೀಲ್ ಮಾತನಾಡಿ, ಸಂಜೀವಿನಿ ಸಂಘದ ಮಹಿಳೆಯರು ವೈಯಕ್ತಿಕ ಕಾಮಗಾರಿಗಳಿಗೆ ಆದ್ಯತೆ ನೀಡಿ ಕಾಮಗಾರಿ ಬೇಡಿಕೆ ಸಲ್ಲಿಸಬೇಕೆಂದರು. ವೈಯಕ್ತಿಕ ಕಾಮಗಾರಿಯಿಂದ ಮಾಸಿಕ ಹಾಗು ಪ್ರತಿ ದಿನ ಆದಾಯ ಪಡೆದು ಆರ್ಥಿಕ ಸದೃಢರಾಗಬಹುದು ಎಂದು ತಿಳಿಸಿದರು. ಪಂಚಾಯತ ಅಭಿವೃದ್ಧಿ ಅಧಿಕಾರಿ ಸಂಗಮೇಶ ತೇರಿನ ಈಗಾಗಲೇ ಗ್ರಾಮಸ್ಥರಿಂದ ಬಂದ ಕಾಮಗಾರಿಗಳ ಬೇಡಿಕೆಗಳನ್ನು ಗ್ರಾಮಸಭೆಯಲ್ಲಿ ವಿವರಿಸಿದರು. ಗ್ರಾಮಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ ಆಡಳಿತಾಧಿಕಾರಿ ಮಹೇಶ್ ವಹಿಸಿಕೊಂಡಿದ್ದರು. ಸಭೆಯಲ್ಲಿ ಸುರಕ್ಷಾ ಸಂಜೀವಿನಿ ಗ್ರಾ.ಪಂ ಮಟ್ಟದ ಒಕ್ಕೂಟದ ಅಧ್ಯಕ್ಷೆ ಗಂಗಮ್ಮ ಸಿಂಧೋಗಿ, ಎಂಬಿಕೆ ದ್ಯಾಮಮ್ಮ ಕುರಿ, ಕೃಷಿ ಸಖಿ ಶ್ರೀದೇವಿ, ಗ್ರಾಮ ಪಂಚಾಯತಿ ಸಿಬ್ಬಂದಿಗಳಾದ ಪಂಚಾಕ್ಷರಿ, ಮಾಲತೇಶ, ದೇವಪ್ಪ ಗ್ರಾಮ ಕಾಯಕ ಮಿತ್ರ ವಿಜಯಲಕ್ಷ್ಮೀ, ರೈತರು, ಸಂಜೀವಿನಿ ಯೋಜನೆಯ ಒಕ್ಕೂಟದ ಮಹಿಳೆಯರು, ಗ್ರಾಮಸ್ಥರು, ಕಾಯಕ ಬಂಧುಗಳು ಹಾಜರಿದ್ದರು.

# ಲೇಖಕರ ದಿನಚರಿ...

## ಗಜಲ

ನನ್ನೊಳಗಿನ ಅವನಿಗೂ ಹೇಳಲಾಗದ ನೋವಿದೆ
ಅವನೊಳಗಿನ ನನಗೂ ಬಿಟ್ಟಿರಲಾಗದ ಹಿತವಿದೆ

ಬದುಕು ಒಳಿತು ಕೆಡಕುಗಳ ಗುಲಾಮ ಕಣೆ ಸಾಕಿ
ಅವಳೊಳಗಿನ ಮದಿರೆಗೂ ಸುಖವಿರದ ಗುಂಗಿದೆ

ಒಲವು ಕೊಡಲು ಭಾಗ್ಯವಲ್ಲ ಪಡೆಯಲ್ಯೋಗವೂ
ಅವನೊಳಗಿನ ನಗುವಿಗೂ ಅವಳಿಂದ ಭಯವಿದೆ

ಸರಿಸಿ ನಡೆಯುವುದು ಕಲಿ ಮನುಜ ದುರಾತ್ಮದಾಸೆ
ಚೆಲುವಿನವಳ ಗೆಲುವಿಗೂ ಅವನಿಯಿಂದ ಸಾವಿದೆ

ಸಾವಿನಂಗಡಿಯೊಳಗೆ ಸಾರ್ಥಕವಾಗಿರು 'ಅಜ್ಞಾದ'
ಅಂಗಭೋಗದ ಬೆನ್ನೇರದಿರು ಲಂಪಟತನದ ಸಾಲಿದೆ



ಮೈಬೂಬಸಾಹೇಬ.ವೈ.
ಕ.ವಿ.ವಿ ಧಾರವಾಡ

## ಆಭಾಸಕೆ ಗುರಿ

ಮುಖಕ್ಕೆ ಮುಖವಾಡ ಧರಿಸಿ
ಮಾತಿಗೂ ಬರ ತಂದು
ನೆರೆಯವರೇನೆ ಗುರುತಿಸದ
ಹುಲುಮಾನವರು ನಾವಲ್ಲವೇ.

ವಾಸಕೆಂದಿರುವ ಏಕೈಕ ಗ್ರಹ
ಅಭಾಸಕೆ ಗುರಿಯಾಗುತ್ತಿದೆ
ಮದ್ದು ಗುಂಡುಗಳ ಗರ್ಭಧರಿಸಿ
ಮುದ್ಧಿಸುವುದನೆ ಮರೆತಂತಿದೆ

ಭಿನ್ನಮತದ ವ್ಯಾಧಿಗೆ
ಜಿದ್ದಾಜಿದ್ದಿನ ಪೈಪೋಟಿ
ಸೃಷ್ಟಿಗೂ ಕ್ಯಾತೆ
ಮಂಗನ ಕೈಯಲ್ಲಿ ಮಾಣಿಕ್ಯ.

ಯೋಗ್ಯ ವಾಸಸ್ಥಾನ
ಕರಿನೆರಳು ವ್ಯಾಪಿಸುತ
ಸರಿ ದಾರಿ ಪರಿವೆಯಿಲ್ಲದೆ
ದಿವಾಳಿ ಅಂಚಿನಲ್ಲಿ ತಿಳುವಳಿಕೆ ಕೊರತೆ.



ರೇಷ್ಮಾ ಕಂದಕೂರ

## ಹೇಳು,,ಹೋದ ಕಾರಣ...



ಇರುವೆನೆಂದು ಹೇಳಿ
ಇರಲಾರದೆ
ಎದೆಯ ಊರ ತೊರೆದು
ಬಹುದೂರ ಹೋದೆ.
ಹಾದಿಯ ಬಳ್ಳಿಯೊಂದು
ಹಾವಾಗಿ ಹೆಡೆಯೆತ್ತಿ
ನಾ ಬರುವ ದಾರಿಯಲಿ
ದ್ಯಾನ ಕುಳಿತಿದೆ.
ಹೇಳು,, ಹೋದ ಕಾರಣ.

ಮೌನದೂರಿಗೆ
ಮಲ್ಲಿಗೆಯಾಗಿ ಬಂದು
ಮನವೆಲ್ಲ ಆಘ್ರಾಣಿಸಿ
ಘಮಿಸಿ ಗಂಧ ಗೂಡಿಸಿ
ಗಾಳಿಗೆ ಗಡಿಯ ಕಟ್ಟಿ
ಆಚೆ ನೀನು, ಈಚೆ ನಾನು
ಗೆರೆಯ ಹಾಕಿ
ಮೌನದ ಮನೆಗೆ
ಪ್ರೀತಿಯ ಮೊಳೆಯ ಜಡಿದು
ಜಾರಿ ಹೋದೆ
ಹೇಳು,, ಹೋದ ಕಾರಣ..

ಸಿರಿತನದ ತೆರೆಯ ಮೇಲೆ
ದೊರೆತನದ ಅಂಬಾರಿ ಹಾಸಿ
ಅಲೆ ಅಲೆಗೂ ಅಲೆಯುವಂತೆ
ಆಕಾಶದ ನಕ್ಷತ್ರವಾಗಿ
ಕಣ್ಣ ಕಡಲಿನಾಚೆಗೂ ನಿಲುಕದಂತೆ
ಬಹು ದೂರ ದೂರ ಸಾಗಿದೆ.
ಹೇಳು,,, ಹೋದ ಕಾರಣ



ಯಲ್ಲಪ್ಪ ಮಲ್ಲಪ್ಪ
ಹರ್ನಾಳಗಿ. ಕೊಪ್ಪಳ

# ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ

(* ನಮ್ಮ ಮನೆಯ ಸಚ್ಚಿ *ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ ತಿಂಡಿ ಬೇಕು ತೀರ್ಥ ಬೇಕು ಎಲ್ಲ ಬೇಕು ತಿಂಡಿ ತಿಂದು ಮನೆಯನ್ನು ಗಟ್ಟಿಯಾಗಿ ಕಾಯಬೇಕು ಏನು ಪುಟ್ಟ ಮಕ್ಕಳ ರೈಮ್ಸ್ ಬರೆದಿದ್ದೇನೆ ಎಂದು ಕೊಂಡಿದ್ದೀರಾ? ಶ್ವಾನಗಳ ಮಹತ್ವದ ಲೇಖನವನ್ನು ಬರೆಯಬೇಕು ಎಂದು ಆಸೆ ಆಯಿತು ಅದಕ್ಕಾಗಿ ಒಂದು ಚಿಕ್ಕ ಪ್ರಯತ್ನವನ್ನು ಮಾಡಿದೆ. ಚಿಕ್ಕ ಚಿಕ್ಕ ಪದಗಳಿಂದ ಕೂಡಿದ ಈ ಒಂದು ಹಾಡನ್ನು ಹಾಡುತ್ತಾ ಮಕ್ಕಳಿಗೆ ಊಟ ಮಾಡಿಸುವಾಗ ಹಾಡು ಕಲಿಸುವಾಗ ಮಕ್ಕಳು ಅಳುವಾಗ ಅಳುವುದನ್ನು ನಿಲ್ಲಿಸಲು.

ಮನೆಗೆ ಕಳ್ಳ ಬಂದಾಗ ಎಚ್ಚರಿಕೆಯ ಗಂಟೆಯಾಗಿ ನಮ್ಮ ಮನೆಯನ್ನು ಸುರಕ್ಷಿತವಾಗಿ ರಕ್ಷಣೆ ಮಾಡಲು ಒಂದು ಚಿಕ್ಕ ಪ್ರಾಣಿ ಇರಬೇಕು.ಬರುವ ಅಪಾಯದಿಂದ ತಪ್ಪಿಸುವ ಮೂಕ ಪ್ರಾಣಿಯ ಬಗ್ಗೆ ಒಂದಿಷ್ಟು ವಿಚಾರಗಳು. ಅಕ್ಷರಗಳ ರೂಪದಲ್ಲಿ ಬರೆಯಲು ಕಾರಣ ನಮ್ಮ ಮನೆಯ( ಸಚ್ಚಿ) ಅಂದರೆ ನಮ್ಮ ಮನೆಯ ಶ್ವಾನದ ಹೆಸರು ಸಚ್ಚಿ ಅಂತ. ಸಾಕು ಪ್ರಾಣಿಗಳಲ್ಲಿ ಅತ್ಯಂತ ಶ್ರೇಷ್ಠವಾದ ಅತಿ ಸೂಕ್ಷ್ಮ ಬುದ್ಧಿಯುಳ್ಳ ಮನುಷ್ಯನಿಗೆ ಹತ್ತಿರವಾದ ಪ್ರಾಣಿ ಎಂದರೆ ಶ್ವಾನ ಅತ್ಯಂತ ನಂಬಿಕಸ್ತ ಮತ್ತು ಪ್ರೀತಿಯ ಜೀವಿಯಾಗಿದೆ.ಮನೆಯಲ್ಲಿ ಒಂದು ಶ್ವಾನ ಇದ್ದರೆ ಅದು ಕೇವಲ ನಾಯಿ ಆಗಿರದೆ ಮನೆಯಲ್ಲಿ ಒಬ್ಬ ಸದಸ್ಯನಂತೆಯೇ ವರ್ತಿಸುತ್ತಾ ಮನೆಯ ಮಂದಿಯ ಜೊತೆ ಇರುತ್ತದೆ. ಇದು ಕೇವಲ ಶ್ವಾನ ಆಗಿರದೆ ಮನೆಯಲ್ಲಿ ಒಬ್ಬ ಸದಸ್ಯನಂತೆಯೇ ಮನೆಯ ಮಂದಿಯ ಜೊತೆ ಇರುತ್ತದೆ.

ನಾ ಕಂಡಂತೆ ನಮ್ಮ ಮನೆಯ ಸಚ್ಚಿ ಯು ಪ್ರಮುಖವಾಗಿ ಮನೆಯ ಸದಸ್ಯರು ಮನೆಯಲ್ಲಿರುವ ನಾಯಿ ಮರಿಗಳಿಗೆ ಪ್ರೀತಿ ಬಾಂಧವ್ಯ ಕರುಣೆ ಸ್ನೇಹದಿಂದ ಹೊಟ್ಟೆಗೆ ಸರಿಯಾದ ಆಹಾರ ಹಾಕಿದಾಗ ಅವುಗಳ ಜೊತೆ ಆಡಿದಾಗ ನಮ್ಮ ತಲೆಯಲ್ಲಿರುವ ನಕರತ್ಮಕ ಚಿಂತನೆಗಳು



ಮಾಯವಾಗುತ್ತದೆ. ಮನುಷ್ಯನ ಸಾಕು ಪ್ರಾಣಿಯಾದ ನಾಯಿ ಮರಿಗಳ ಜೊತೆ ಆಟ ಆಡುವುದರಿಂದ ರಕ್ತದೊತ್ತಡದಂತಹ ಕಾಯಿಲೆಗಳಿಂದ ದೂರವಿರಲು ಸಾಧ್ಯವಾಗುವುದು. ಮನೆಯ ಸದಸ್ಯರು ಮನೆಗೆ ಮರಳಿದಾಗ ಬಾಲ ಅಲ್ಲಾಡಿಸುತ್ತಾ ಬೌ ಬವ್ ಎಂದು ಹಾರಿ ಸಂಭ್ರಮಿಸುವ ನಾಯಿಯ ಪ್ರೀತಿ ಪ್ರತಿ ಒಬ್ಬರ ಆಯಾಸವನ್ನು ಮರೆಸುತ್ತದೆ. ಮನೆಯ ಸದಸ್ಯರು ಹೊರಗಡೆಯಿಂದ ಮನೆಗೆ ಪ್ರವೇಶಿಸುವಾಗ ಕೈಯಲ್ಲಿ ಒಂದು ಬ್ಯಾಗು ಇತ್ತು ಎಂದರೆ ನನಗೆ ತಿನ್ನಲು ಏನೂ ಕೊಡುತ್ತಾರೆ ಎಂದು ಪುಟ್ಟ ಮಗುವಿನಂತೆ ಬಾಲ ಅಲ್ಲಾಡಿಸುತ್ತಾ ತನ್ನ ನೋಟದಿಂದ ಗಮನ ಸೆಳೆಯುತ್ತದೆ. ಮನುಷ್ಯನ ಭಾವನೆಗಳನ್ನು ತುಂಬಾ ಬೇಗವಾಗಿ ಅರ್ಥಮಾಡಿಕೊಳ್ಳುವ ಮುಗ್ಧ ಮನಸ್ಸಿನ ಪ್ರಾಣಿ ಇದಾಗಿದೆ. ದಿನವೂ ಶ್ವಾನವನ್ನು ವಾಯು ವಿಹಾರಕ್ಕೆ ಕರೆದುಕೊಂಡು ಹೋಗುವದರಿಂದ ನಮಗೂ ಉತ್ತಮ ವ್ಯಾಯಾಮವಾಗುತ್ತದೆ.

ಶ್ವಾನಗಳ ಜೊತೆ ಸಮಯ ಕಳೆಯುವುದರಿಂದ "ಮನಸ್ಸಿನ ಒತ್ತಡಗಳು ಕಡಿಮೆ ಆಗುತ್ತದೆ" ಇನ್ನು ಭದ್ರತೆಯ ವಿಷಯಕ್ಕೆ ಬಂದರೆ ಮನೆಯ ಕಾವಲಿಗೆ ಆಧುನಿಕ ಸಿಸಿ ಕ್ಯಾಮೆರಾ ಗಳು ಮನೆಯ ಸುತ್ತ ಹಾಕಿಸುವುದಕ್ಕಿಂತ ಮನೆಯ ಕಾವಲಿಗೆ ನಮ್ಮ ರಕ್ಷಣೆಗೆ ಶ್ವಾನಗಳಿಗಿಂತ ಉತ್ತಮ ಕಾವಲುಗಾರ ಮತ್ತೊಬ್ಬರಿಲ್ಲ. ಆತ್ಮೀಯರೇ! ಅಪರಿಚಿತರು ಅನುಮಾನಾಸ್ಪದ ವ್ಯಕ್ತಿಗಳು ಬಂದಾಗ ಬೊಗಳುವ ಮೂಲಕ ಮನೆಯ ಮಂದಿಯ ನಿಷ್ಠೆಯ ಪ್ರಾಣಿಯಾಗಿ ನಮಗೆ ಎಚ್ಚರಿಕೆ ನೀಡುತ್ತದೆ.

ಸಾಕು ಪ್ರಾಣಿ ಯಾದ ಸಚ್ಚಿಯು ಆರೈಕೆ ಮಾಡುವುದು ನಮ್ಮ ಕರ್ತವ್ಯ ಅದಕ್ಕೆ ಸರಿಯಾದ ಆಹಾರ ನೀರು ಸೂಕ್ತವಾದ ಕಾಲಕಾಲಕ್ಕೆ ಲಸಿಕೆ ಹಾಕಿಸುವುದು ಅದು ಮಲಗುವ ಕುಡುವ ಆವಾಸ ಸ್ಥಾನವನ್ನು ಸ್ವಚ್ಛವಾಗಿ ಇಡುವುದು ಪಶು ವೈದ್ಯರ ಬಳಿ ಕರೆದುಕೊಂಡು ಹೋಗುವುದು ಸಾಕು ಪ್ರಾಣಿಗಳನ್ನು ಸಾಕುವವರ ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ. ಮನುಷ್ಯ ಮತ್ತು ನಾಯಿಯ ನಡುವಿನ ಪ್ರೀತಿ ವಾತ್ಸಲ್ಯಕ್ಕೆ ಶತಮಾನಗಳ ಇತಿಹಾಸ ಇದೆ. ಜಗತ್ತಿನಲ್ಲಿ ಯಾವುದೇ ಶರತ್ತುಗಳಿಲ್ಲದ ಪ್ರತಿಯಾಗಿ ಏನನ್ನು ಅಪೇಕ್ಷಿಸದೆ ನಿಷ್ಕಲ್ಮಶವಾಗಿ ಪ್ರೀತಿಸುವ ಏಕೈಕ ಜೀವಿ ಎಂದರೆ ಅದು ಶ್ವಾನ ಮಾತ್ರ ನಮ್ಮ ಮನೆಯ ಸಚ್ಚಿ ನಮಗೆ ನಿಷ್ಕಲ್ಮಶ ಪ್ರೀತಿ ನಿಷ್ಠೆಯನ್ನು ನೀಡುತ್ತದೆ. ಅದನ್ನು ಪ್ರೀತಿಯಿಂದ ಸಾಕಿ ಬೆಳೆಸುವುದು ಪ್ರತಿಯೊಬ್ಬರ ಮನೆಯ ಸದಸ್ಯರ ಕರ್ತವ್ಯ. ವಿಶೇಷವಾಗಿ ಚಿಕ್ಕ ಮಕ್ಕಳಿರುವ ಮನೆಯಲ್ಲೊಂದು ಪುಟ್ಟ ಸಾಕು ಪ್ರಾಣಿಯಾದ ಶ್ವಾನ ಇದ್ದರೆ ಅದರ ಆರೈಕೆ. ಶುಶ್ರೂಷೆ ಮಾಡುವುದನ್ನು ಮಕ್ಕಳು ಕಲಿಯುತ್ತಾರೆ.

ಮನೆಯಲ್ಲಿರುವ ಪ್ರತಿಯೊಬ್ಬರ ಹಾಗೂ ಹೋಗುಗಳು ಉಪಚಾರ ಪ್ರೀತಿ ಬಾಂಧವ್ಯ ದೊಂದಿಗೆ ಬೆಳೆಯಲು ಸಹಕಾರಿ ಆಗುತ್ತದೆ. ಸಾಕುಪ್ರಾಣಿ ಪ್ರೇಮಿಯ ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ. ನಾಯಿಯ ಜೀವಿತಾವಧಿ ಮನುಷ್ಯನಿಗಿಂತ ಕಡಿಮೆ ಇರಬಹುದು.ಆದರೆ ಅದು ನಮಗೆ ನೀಡುವ ಪ್ರೀತಿ ಮತ್ತು ಕಲಿಸುವ ಪ್ರಮಾಣಿಕತೆಯ ಪಾಠ ಜೀವನಪೂರ್ತಿ ನೆನಪಿನಲ್ಲಿ ಉಳಿಯುತ್ತದೆ. ಆದುದರಿಂದ ನಾಯಿ ಕೇವಲ ಒಂದು ಸಾಕು ಪ್ರಾಣಿಯಲ್ಲ ಅದು ಪ್ರೀತಿಯ ಸಂಕೇತವಾಗಿದೆ.

ಕೀರ್ತಿ ಎಸ್ ಪಾಟೀಲ್

# ಕಾಲ ಗತಿ

ಮಂಕು ಕವಿದಾಗೆದೆಗೆ ತುಂಬುವುದು
ಭರವಸೆಯ;
ತೂರುವುದು ರಶ್ಮಿಯನು ಕತ್ತಲೆಯ ನೆಲೆಗೆ.
ಬೋಳುಮರ ಅತ್ತಾಗ ತಳಿರ
ದಯಪಾಲಿಪುದು;
ಶಕ್ತಿದಾಯಕ ಕಾಲ
ಮುದ್ದುರಾಮ....

ಕಾಲದ ನೆರಳಲ್ಲಿ ಬದುಕು ಸಾಗುತ್ತದೆ. ಗಳಿಗೆಗಳ ಮೊತ್ತವೇ ಬಾಳು. ಅನುದಿನ ಹೊಸದು, ಅನುದಿನ ಹೊಸ ಕಲಿಕೆ. ಬದುಕು ವರ್ತಮಾನದಲ್ಲಿ ರೂಪುಗೊಂಡು ಭವಿಷ್ಯ ಸೃಷ್ಟಿಸುತ್ತದೆ. ವೇಗ ,ಸಮಯ, ಸಂದರ್ಭ, ಕಾಲ ನಿರ್ಧರಿಸುತ್ತದೆ.

ಅನುಗಾಲ ಅದರ ಅಣತಿಯಂತೆ ನಾವು ಚಲಿಸಬೇಕು. ಕೆಲವೊಮ್ಮೆ ಲಗುಬಗೆಯಿಂದ ಕೆಲವೊಮ್ಮೆ ಅಗಿಬಿಗಿಯಿಂದ ಅದರೊಂದಿಗೆ ಜೊತೆಗೂಡಿ ನಡೆಯಬೇಕು. ಬೆಳಕಿನೊಂದಿಗೆ ಹುಟ್ಟುವ ಕಾಲದ ಗತಿ ನೆರಳಿನಂತೆ ಮಾಯವಾಗುತ್ತದೆ. ಕ್ಷಣ ಕಾಲ ವರ್ತಮಾನದಲ್ಲಿದ್ದು ಮುಂದೆ ಅದೇ ನಾಳೆ ಎಂದಾಗುತ್ತದೆ ಹೀಗಾಗಿ ಮಾಡಬೇಕಾದುದನ್ನೆಲ್ಲ ಆ ಗಳಿಗೆಯಲ್ಲಿ ಮಾಡಬೇಕು. ಉರುಳಿದ ಕಾಲ ಮರಳುವುದಿಲ್ಲ. ಅದರ ಚಲನೆ ಊಹಿಸಬಹುದು ಹಿಡದಿಡಲಾಗುವುದಿಲ್ಲ.

ತನ್ನ ನೆಲೆಯಲ್ಲಿ ಎಲ್ಲ ನಿಗೂಢತೆಯನ್ನಡಗಿಸಿಕೊಂಡು ಗತಕಾಲದ ವೈಭವವನ್ನು ಸೆರೆಹಿಡಿದಿರುತ್ತದೆ. ನಾಳೆಯ ಸುಂದರ ಭವಿತವ್ಯವನ್ನು ಕಾಣುವ ಮನದ ಅಗಸೇ ಬಾಗಿಲಿಗೆ ತಳಿರು ತೋರಣ ಕಟ್ಟಿರುತ್ತದೆ. ಮನದ ಕಾತರತೆಯನ್ನು ಭೇದಿಸಿ ನಡೆಯಬಹುದಾದ ಗಟ್ಟಿ ಧ್ವನಿ ಕಾಲಕ್ಕಿದೆ. ಸಿಗಲಾರದ ಸತ್ವವನ್ನು ದಯಪಾಲಿಸುತ್ತಾ ತನ್ನ ನಿಶ್ಚಲ ನಿಲುವಿಗೆ ಜೀವ ತುಂಬುತ್ತ ನಡೆಯುತ್ತದೆ. ಇದಕ್ಕೆಲ್ಲ ಉತ್ತರ ನೀಡಬಹುದಾದ ಅತಿ ಚತುರತೆ ಅದರ ಅತರ್ಕ್ಯ ಗೋಚರ ನಿಲುವಿಗಿದೆ. ಅದನ್ನು ಒಪ್ಪಿ ಅಪ್ಪಿ ಸಾಗುವ ನಡಿಗೆ ನಮ್ಮದಾಗಿದೆ. ಬರಡಾದ ಭಾವಗಳಿಗೆ ನವಿರ ತೊಡಿಸುತ್ತ, ತುಡಿಯುತ್ತಿರುವ ಮನಕ್ಕೆ ಭಾವ ಸ್ಪಂದನ ನೀಡುತ್ತಾ, ತನ್ನ ಅತಿಶಯಿತ ಅತಿಬಲ ತೋರುವುದೇ ಕಾಲ ನಿರ್ಣಯವಾಗಿದೆ.



ಗತಿಸಿದ ಕ್ಷಣಗಳಿಗೆ ಹೊಸ ರೂಪ ನೀಡಿ ತನು ಮನ ಮಾಗಿ ಬಾ ಗಿಸಿ ತನ್ನ ಅತ್ಯಾಯತ ನಿಲುವ ತಿಳಿಸಿ ಪ್ರೌಢಿಮೆಯ ಮೆರೆಯುವ ಕಾಲ ನಮ್ಮ ಹಿಡಿತಕ್ಕೆ ಸಿಗಲಾರದು. ನೀರವತೆಯಲಿ ನಿಧಾನ ಚಲಿಸುತ್ತ, ಕ್ಷಣಕೊಮ್ಮೆ ಉತ್ಸುಕತೆಯ ಹೆಚ್ಚುತ್ತ, ಅತ್ಯಾಸನ್ನವಿದ್ದರು ನಿಲುಕದೇ ಇರುವ ಕಾಲನ ನಡಿಗೆ ಸೂಕ್ಷ್ಮ ಸಂವೇದನೀ ಯ. ಕಾರ್ಯ ತತ್ಪರನಾದವಗೆ ಪರಿಶ್ರಮದ ಫಲ ನೀಡುವ ನ್ಯಾಯಾಧೀಶನಾಗಿ, ಅದೃಶ್ಯ ರೂಪದಲ್ಲಿ ಅದೃಷ್ಟವಾಗಿ, ಅದ್ವಂದ್ವಗಳಿಗೆ ಉತ್ತರವಾಗಿ, ಸಮರ್ಥ ಉತ್ತರ ನೀಡಬಲ್ಲ ಕಾಲ ನಾಯಕನಿದ್ದಂತೆ.

ಕ್ಷಣ ಕ್ಷಣದ ಲೆಕ್ಕ ಬರೆದಿಟ್ಟು ಅದಕ್ಕೆ ಬಡ್ಡಿಗಳ ಚತುರತೆಯಿಂದ ಕೂಡಿಸಿ ಆಯವ್ಯಯಗಳ ಪಟ್ಟಿ ಮಾಡುವ ಕಾಲದ ಲೆಕ್ಕಪತ್ರ ಗಣಕಯಂತ್ರವನ್ನೂ ಹಿಂದಿಕ್ಕುತ್ತದೆ. ಆದ್ಯತೆಯನ್ನರಿತು ಮಾಡುವ ಕಾರ್ಯಗಳಿಗೆ ಸಿದ್ಧಿಯಾಗಿ, ಅರಿವಿನಡಿಯಲ್ಲಿ ಬೆಳಗುವ ಜ್ಯೋತಿಯಾಗಿ, ಬೇಗು ದಿಗಳಿಗೆ ಮುಲಾಮ್ ಆಗಿ, ಅಧಿಗತಕ್ಕೆ ಆಧೀಶನಾಗಿ, ಅನುಗಾಲ ಜೊತೆಗೂಡಿ ಚಲಿಸುವ ನೆರಳಾಗಿ,

ಬಾಳಿನುದಾರತೆಯ ಪ್ರತಿಫಲನವಾಗಿ, ಅಧ್ಯಯನಶೀಲತೆಗೆ ಅದಿರೋಹಣವಾಗಿ, ಅಧ್ಯಾತ್ಮದರಿವಿನ ಅನಂತ ಸೌಖ್ಯವಾಗಿ, ತನ್ನ ನಿಲುವಿನಲ್ಲಿ ಅನಂತ ಜ್ಞಾನವನ್ನು ಬಚ್ಚಿಟ್ಟುಕೊಂಡ ಕಾಲ ನಡೆ ಪರಿವ್ರಾಜಕದಂತೆ. ಅದರ ಮಹತ್ವವನ್ನು ಅರಿತು ಬಾಳಿದಾಗ ನಿಜಕ್ಕೂ ನಮ್ಮ ನಿಜನೇಹಿಗ ಕಾಲವಾಗುತ್ತದೆ. ಎಚ್ಚರದ ನಡಿಗೆ ಅವಶ್ಯಕ ಅಲ್ಲವೇ??



ಆರತಿ ಏನ್ ರಾವ್

# ಮಾನವ ಬದುಕಿನ ಅತಿ ಸುಂದರ



ಆವಿಷ್ಕಾರಗಳಲ್ಲಿ ಗೆಳೆತನವೂ ಒಂದು. ಅದು ರಕ್ತಸಂಬಂಧಗಳಿಂದ ಹುಟ್ಟಿದ ಬಂಧನವಲ್ಲ; ಹೃದಯಗಳ ಸಾಮರಸ್ಯದಿಂದ ಅರಳಿದ ಭಾವಲೋಕ. ಜನ್ಮವು ನಮಗೆ ಬಂಧುಗಳನ್ನು ನೀಡಬಹುದು; ಆದರೆ ಜೀವನವು ನಮ್ಮ ವ್ಯಕ್ತಿತ್ವಕ್ಕೆ ತಕ್ಕ ಗೆಳೆಯರನ್ನು ಉಡುಗೊರೆಯಾಗಿ ನೀಡುತ್ತದೆ. ಆದ್ದರಿಂದಲೇ ಗೆಳೆತನವು ಪ್ರಕೃತಿಯ ಅತ್ಯಂತ ಅಪೂರ್ವ ಅನುಗ್ರಹಗಳಲ್ಲಿ ಒಂದಾಗಿದೆ.

ಗೆಳೆತನವು ಕೊಡು-ಕೊಳ್ಳುವ ವ್ಯವಹಾರವಲ್ಲ; ಲಾಭ-ನಷ್ಟಗಳ ಲೆಕ್ಕಾಚಾರವೂ ಅಲ್ಲ. ಅದು ಅಧಿಕಾರದ ಅಹಂಕಾರದಿಂದ ಆಳುವ ಸಂಬಂಧವಲ್ಲ; ಪ್ರೀತಿಯ ವಿನಯದಿಂದ ಬೆಸೆಯುವ ಅನುರಾಗ ಬಂಧ. ಎರಡು ಮನಸ್ಸುಗಳು ಪರಸ್ಪರ ವಿಶ್ವಾಸ, ಗೌರವ ಮತ್ತು ನಿಸ್ವಾರ್ಥತೆಯ ಸೇತುವೆಯ ಮೇಲೆ ಭೇಟಿಯಾದಾಗ ಹುಟ್ಟುವ ಅದ್ಭುತ ಅನುಭವವೇ ನಿಜವಾದ ಸ್ನೇಹ.

ಸ್ನೇಹಕ್ಕೆ ಜಾತಿಯ ಗೋಡೆಗಳಿಲ್ಲ, ಮತದ ಬೇಲಿಗಳಿಲ್ಲ, ವರ್ಣದ ವಿಭಜನೆಗಳಿಲ್ಲ, ಲಿಂಗದ ಮಿತಿಗಳಿಲ್ಲ. ಅದು ಮಾನವೀಯತೆಯ ವಿಶಾಲ ಆಕಾಶದಲ್ಲಿ ಹಾರುವ ಮುಕ್ತ ಹಕ್ಕಿ. ಎಲ್ಲ ರೀತಿಯ ಭೇದಗಳನ್ನು ಮೀರಿ "ನಾವು" ಎಂಬ ಭಾವವನ್ನು ಕಟ್ಟಿಕೊಡುವ ಅದ್ಭುತ ಶಕ್ತಿ ಸ್ನೇಹಕ್ಕಿದೆ. ಆದ್ದರಿಂದಲೇ ನಾಗರಿಕತೆಯ ಬೆಳವಣಿಗೆಯಲ್ಲಿ ಸ್ನೇಹವು ಸಾಮಾಜಿಕ ಸಾಮರಸ್ಯದ ಜೀವನಾಡಿಯಾಗಿದೆ.

ನಿಜವಾದ ಗೆಳೆಯನು ನಮ್ಮ ಯಶಸ್ಸಿಗೆ ಚಪ್ಪಾಳೆ ತಟ್ಟುವವನಷ್ಟೇ ಅಲ್ಲ; ನಮ್ಮ ವೈಫಲ್ಯದಲ್ಲಿ ಹೆಗಲಾಗಿ ನಿಲ್ಲುವವನು. ನಮ್ಮ ಕಣ್ಣೀರಿನ ಭಾಷೆಯನ್ನು ಅರ್ಥಮಾಡಿಕೊಳ್ಳುವವನು, ಮಾತುಗಳಿಗಿಂತ ಮೌನದ ಅರ್ಥವನ್ನು ಗ್ರಹಿಸುವವನು, ನಮ್ಮ ತಪ್ಪುಗಳನ್ನು ಮುಚ್ಚಿಡದೆ ತಿದ್ದುವ ಧೈರ್ಯ ಹೊಂದಿರುವವನೇ ನಿಜವಾದ ಗೆಳೆಯ. ಆತ ನಮ್ಮ ಜೀವನದ ಕನ್ನಡಿಯೂ ಹೌದು, ದಾರಿದೀಪವೂ ಹೌದು.

ಗೆಳೆತನದ ಮೊದಲ ಹೆಜ್ಜೆ ವಿನಯ. ಅಹಂಕಾರವು ಸಂಬಂಧಗಳನ್ನು ಒಡೆಯುತ್ತದೆ; ವಿನಯವು ಅವನ್ನು ಬೆಸೆಯುತ್ತದೆ. ಸ್ವಾರ್ಥವು ಮನಸ್ಸುಗಳನ್ನು ದೂರ ಮಾಡುತ್ತದೆ; ನಿಸ್ವಾರ್ಥ ಪ್ರೀತಿಯು ಅವನ್ನು ಒಂದಾಗಿಸುತ್ತದೆ. ದ್ವೇಷವು ಹೃದಯವನ್ನು ಬರಿದಾಗಿಸಿದರೆ, ಸ್ನೇಹವು ಅದರಲ್ಲಿ ವಸಂತವನ್ನು ಅರಳಿಸುತ್ತದೆ. ಆದ್ದರಿಂದ ಸ್ನೇಹವು ಕೇವಲ ಭಾವನೆಯಲ್ಲ; ಅದು ವ್ಯಕ್ತಿತ್ವವನ್ನು ಪರಿಷ್ಕರಿಸುವ ಮೌಲ್ಯಶಿಕ್ಷಣ.

ಗಿಡದಲ್ಲಿ ಅರಳಿದ ಹೂವು ತನ್ನ ಪರಿಮಳವನ್ನು ತನ್ನೊಳಗೆ ಮಾತ್ರ ಉಳಿಸಿಕೊಳ್ಳುವುದಿಲ್ಲ; ಸುತ್ತಲಿನ ವಾತಾವರಣವನ್ನೇ ಸುಗಂಧಮಯಗೊಳಿಸುತ್ತದೆ. ಅದೇ ರೀತಿ ನಿಜವಾದ ಸ್ನೇಹವೂ ತನ್ನ ಸಾನ್ನಿಧ್ಯದಿಂದ ಬದುಕಿಗೆ ಸೌಂದರ್ಯವನ್ನು ನೀಡುತ್ತದೆ. ಮಗುವಿನ ಮುಗ್ಧ ನಗುವಿನಷ್ಟು ನಿರ್ಮಲ, ಪೂರ್ಣಿಮೆಯ ಚಂದಿರನ ಬೆಳಕಿನಷ್ಟು ಶಾಂತ, ಚೈತ್ರದ ಕೋಗಿಲೆಯ ಇಂಚರದಷ್ಟು ಮಧುರವಾದ ಅನುಭವವೇ ಗೆಳೆತನ.

ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಜಗತ್ತನ್ನು ಅಂಗೈಯಲ್ಲಿ ತಂದಿವೆ. ಸಾವಿರಾರು ಸಂಪರ್ಕಗಳು ಕ್ಷಣಾರ್ಧದಲ್ಲಿ ಸಿಗುತ್ತವೆ. ಆದರೆ ಹೃದಯವನ್ನು ಸ್ಪರ್ಶಿಸುವ ಸಂಬಂಧಗಳು ವಿರಳವಾಗುತ್ತಿವೆ. ಪರದೆಯ ಮೇಲಿನ ಪರಿಚಯಗಳಿಗಿಂತ ಮನದಾಳದಲ್ಲಿ ನೆಲೆಸುವ ಸ್ನೇಹವೇ ಮನುಷ್ಯನನ್ನು ಸಂಪನ್ನನನ್ನಾಗಿಸುತ್ತದೆ. ಆದ್ದರಿಂದ ಸಂಬಂಧಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕಿಂತ, ಸಂಬಂಧಗಳ ಸಾರ್ಥಕತೆಯನ್ನು ಉಳಿಸಿಕೊಳ್ಳುವುದು ಇಂದಿನ ಸಮಾಜದ ಅಗತ್ಯವಾಗಿದೆ.

ವಿದ್ಯಾರ್ಥಿ ಜೀವನದಲ್ಲಿ ಗೆಳೆಯರ ಆಯ್ಕೆಯೇ ಭವಿಷ್ಯದ ದಿಕ್ಕನ್ನು ನಿರ್ಧರಿಸುತ್ತದೆ. ಸಜ್ಜನ ಸ್ನೇಹಿತನು ಗುರಿಯತ್ತ ಮುನ್ನಡೆಯುವ ಶಕ್ತಿಯಾಗುತ್ತಾನೆ; ದುರ್ಜನ ಸ್ನೇಹ ಜೀವನದ ಹಾದಿಯನ್ನು ತಪ್ಪಿಸಬಲ್ಲದು. ಹೀಗಾಗಿ ಸ್ನೇಹವನ್ನು ಆಯ್ಕೆ ಮಾಡುವಾಗ ವ್ಯಕ್ತಿಯ ಮೌಲ್ಯಗಳು, ನಡತೆ, ಮಾನವೀಯತೆ ಮತ್ತು ಆದರ್ಶಗಳನ್ನು ಮಾನದಂಡವಾಗಿಸಬೇಕು.

ಜೀವನದ ಸಂಜೆಯ ವೇಳೆಯಲ್ಲಿ ಮನುಷ್ಯನು ಹಿಂದಿರುಗಿ ನೋಡುವುದು ಸಂಪಾದಿಸಿದ ಆಸ್ತಿಯನ್ನಲ್ಲ; ಸಂಗ್ರಹಿಸಿದ ಹುದ್ದೆಗಳನ್ನಲ್ಲ; ತನ್ನೊಂದಿಗೆ ನಡೆದ ಜೀವಂತ ನೆನಪುಗಳನ್ನು. ಆ ನೆನಪುಗಳ ಮಧ್ಯೆ ಚಿರಕಾಲ ಹಸಿರಾಗಿರುವುದು ನಿಷ್ಕಲ್ಮಷ ಗೆಳೆತನವೇ. ಅದು ನೆನಪಿನ ಪುಟಗಳಲ್ಲಿ ಒಣಗದ ಹೂವು; ಕಾಲದ ಪ್ರವಾಹದಲ್ಲೂ ಮಸುಕಾಗದ ಸುಗಂಧ.

ಆದ್ದರಿಂದ ಗೆಳೆತನವನ್ನು ಕಾಪಾಡೋಣ. ಅಹಂಕಾರಕ್ಕಿಂತ ಆತ್ಮೀಯತೆಯನ್ನು, ಸ್ವಾರ್ಥಕ್ಕಿಂತ ಸಹೃದಯತೆಯನ್ನು, ದ್ವೇಷಕ್ಕಿಂತ ಪ್ರೀತಿಯನ್ನು, ದಾನವತೆಗಿಂತ ಮಾನವೀಯತೆಯನ್ನು ಬೆಳೆಸೋಣ. ಏಕೆಂದರೆ ಮನುಷ್ಯನ ಬದುಕನ್ನು ಸುಂದರಗೊಳಿಸುವ ಮಹಾಕಾವ್ಯವಿದ್ದರೆ, ಅದರ ಮೊದಲ ಅಧ್ಯಾಯವೇ ಗೆಳೆತನ.

# ಬಾಲ್ಯ ವಿವಾಹ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಜಾಗೃತಿ ಕಾರ್ಯಕ್ರಮ

## ಬಾಲ್ಯ ವಿವಾಹ ನಿಷೇಧ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ: ನ್ಯಾ. ಮಹಾಂತೇಶ್ ಎಸ್. ದರಗದ್

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಮಕ್ಕಳ ಮೇಲಿನ ದೌರ್ಜನ್ಯ ತಡೆ, ಕಾನೂನು ನೆರವು ಪಡೆಯುವ ವಿಧಾನಗಳನ್ನು ಅರಿತುಕೊಳ್ಳುವುದರ ಜೊತೆಗೆ, ವಿದ್ಯಾರ್ಥಿಗಳು ಶಿಸ್ತು ಮತ್ತು ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜವಾಬ್ದಾರಿಯುತ ನಾಗರಿಕರಾಗಬೇಕು. ಬಾಲ್ಯ ವಿವಾಹ ನಿಷೇಧ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ನಾವೆಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಮಹಾಂತೇಶ್ ಎಸ್. ದರಗದ್ ಕರೆ ನೀಡಿದರು.**




ಬುಧವಾರದಂದು ಬಳ್ಳಾರಿ ರೀಡ್ಸ್ ಸಂಸ್ಥೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ, ಮಕ್ಕಳ ವಿಶೇಷ ಪೊಲೀಸ್ ಘಟಕ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಇವರುಗಳ ಸಂಯುಕ್ತಾಶ್ರಯದಲ್ಲಿ ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಬಾಲ್ಯವಿವಾಹ ನಿಷೇಧ, ಪೋಕ್ಸೋ, ಸೈಬರ್ ಕ್ರೈಂ, ಮಾದಕ ದ್ರವ್ಯ ಮುಕ್ತ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಜಿಲ್ಲಾಮಟ್ಟದಲ್ಲಿ ಹಮ್ಮಿಕೊಂಡಿದ್ದ ಹದಿಹರೆಯದ ಹೆಣ್ಣುಮಕ್ಕಳ ಸಮಾವೇಶ-2026 ಅನ್ನು ಉದ್ಘಾಟಿಸಿ ಅವರು ಮಾತನಾಡಿದರು. ಭವಿಷ್ಯದ ಜವಾಬ್ದಾರಿಯುತ ಪ್ರಜೆಗಳಾದ ನೀವುಗಳು ಸಮಾಜದ ಅನಿಷ್ಠ ಪದ್ಧತಿಗಳ ಬಗ್ಗೆ, ದುಶ್ಚಟಗಳ ದುಷ್ಪರಿಣಾಮದ ಬಗ್ಗೆ ಅರಿತುಕೊಳ್ಳಬೇಕು.

ಅವುಗಳಿಂದ ದೂರ ಇರುವುದರ ಜೊತೆಗೆ ನಿಮ್ಮ ಸುತ್ತಲಿನ ಪರಿಸರದಲ್ಲೂ ಕೂಡ ಯಾರೂ ದುಶ್ಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕು. ಮೊಬೈಲ್ ಎನ್ನುವ ಮಾಯಾಜಾಲವನ್ನು ನಿಮ್ಮ ವಿದ್ಯಾಭ್ಯಾಸ, ಶೈಕ್ಷಣಿಕ ಉಪಯೋಗಕ್ಕಾಗಿ ಮಾತ್ರ ಬಳಸಬೇಕು. ಮೊಬೈಲ್ ಗೆ ಅಂಟಿಕೊಳ್ಳಬಾರದು. ಸೈಬರ್ ಕ್ರೈಂ ಇಂದು ನಿಮ್ಮಂತಹ ಯುವ ಜನರನ್ನೇ ಗುರಿಯಾಗಿಸಿಕೊಂಡು ವಿವಿಧ ಆಮಿಷಗಳ ಮೂಲಕ ನಿಮ್ಮನ್ನು ಬಲಿ ಪಡೆಯುತ್ತಿದ್ದಾರೆ. ಆದ್ದರಿಂದ ಮೊಬೈಲ್ ಬಳಕೆ ಮಿತಿಗೊಳಿಸಿ, ಸೈಬರ್ ಕ್ರೈಂ ನಿಂದ ಸುರಕ್ಷಿತವಾಗಿರಿ ಎಂದು ತಿಳಿಸಿದ ಅವರು ಬಾಲ್ಯ ವಿವಾಹ ನಿಷೇಧ ಕಾಯ್ದೆ-2006, ನಾಲ್ಸಾ ಜಾಗೃತಿ ಯೋಜನೆ-2025, ನಾಲ್ಸಾ ಯೋಜನೆ-2015 ಮತ್ತು ಸಂಕಷ್ಟದ ಸಮಯದಲ್ಲಿ ನೆರವಿಗೆ ಬರುವ '1098' (ಚೈಲ್ಡ್ಲೈನ್) ಹಾಗೂ '112' (ತುರ್ತು ಸೇವೆ) ಸಹಾಯವಾಣಿಗಳ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು.

ಕೊಪ್ಪಳ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಆರ್. ಹೇಮಂತ್ ಕುಮಾರ್ ಅವರು ಮಾತನಾಡಿ, ಸೈಬರ್ ಅಪರಾಧಗಳಿಂದ ಸುರಕ್ಷಿತವಾಗಿರುವುದು ಹಾಗೂ ಪೋಕ್ಸೋ ಕಾಯ್ದೆಯಡಿ ಲಭ್ಯವಿರುವ ಕಾನೂನು ರಕ್ಷಣೆಗಳ ಕುರಿತು ಜಾಗೃತಿ ಮೂಡಿಸಿದರು. ಇದೇ ವೇಳೆ ರೀಡ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಸಿ.ತಿಪ್ಪೇಶಪ್ಪ ಹಾಗೂ ಜಿಲ್ಲಾ ಯುನಿಸೆಫ್ ಘಟಕದ ಹರೀಶ ಜೋಗಿ ಅವರು ಬಾಲ್ಯ ವಿವಾಹ ನಿಷೇಧ, ಪೋಕ್ಸೋ, ಸೈಬರ್ ಕ್ರೈಂ, ಮಾದಕ ವ್ಯಸನ ಮುಕ್ತ ಹಾಗೂ ಮಕ್ಕಳ ಮೇಲಿನ ದೌರ್ಜನ್ಯ ತಡೆ ಕುರಿತು ಹದಿಹರೆಯದ ಹೆಣ್ಣುಮಕ್ಕಳಿಗೆ ಕಾನೂನು ರಕ್ಷಣೆಗಳ ಕುರಿತು ತಿಳಿಸಿದರು.

ಬೃಹತ್ ಜಾಗೃತಿ ಜಾಥಾ: ಸಮಾವೇಶಕ್ಕೂ ಮುನ್ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ಅವರು ಎಸ್.ಪಿ. ಕಚೇರಿ ಆವರಣದಲ್ಲಿ ಜಿಲ್ಲಾಮಟ್ಟದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದರು. ಎಸ್.ಪಿ. ಕಚೇರಿಯಿಂದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನವರೆಗೆ ನಡೆದ ಈ ಜಾಥಾದಲ್ಲಿ ವಿದ್ಯಾರ್ಥಿನಿಯರು ಹಾಗೂ ರೀಡ್ಸ್ ಸಂಸ್ಥೆಯ ಸಿಬ್ಬಂದಿ ಬಾಲ್ಯವಿವಾಹ ನಿಷೇಧ, ಪೋಕ್ಸೋ, ಸೈಬರ್ ಅಪರಾಧ ಹಾಗೂ ಮಾದಕ ದ್ರವ್ಯ ತಡೆಯ ಕುರಿತಾದ ಜಾಗೃತಿ ನಾಮಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಕಾರ್ಯಕ್ರಮದಲ್ಲಿ ಮಕ್ಕಳ ಕಲ್ಯಾಣ ಸಮಿತಿಯ ಪ್ರಕಾಶ್ ಶಿವಪ್ಪ ಕಡಗದ, ಸೈಬರ್ ಕ್ರೈಂ ವಿಭಾಗದ ಡಿ.ವೈ.ಎಸ್.ಪಿ ಸಿದ್ದಲಿಂಗಪ್ಪ ಗೌಡ ಪಾಟೀಲ್, ಡಿ. ಎಸ್. ಆಂಜನೇಯ, ರೀಡ್ಸ್ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ಮಲ್ಲೇಶ ಜಾಧವ್ ಸೇರಿದಂತೆ ಸಂಸ್ಥೆಯ ಸಿಬ್ಬಂದಿ, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಎಸ್ಐಆರ್ ಇನ್ನೊಂದು ತಿಂಗಳು ವಿಸ್ತರಿಸಿ: ಕುಮಾರ್ ಸಮತಳ ಒತ್ತಾಯ

**ಅ.ಶ. ಸುದ್ದಿ ಬಳ್ಳಾರಿ**

**ಬಳ್ಳಾರಿ: ನಗರ ಪ್ರದೇಶದಲ್ಲಿ ಬಿ ಎಲ್ ಓ ಗಳು ಮನೆ ಮನೆಗೆ ಭೇಟಿ ನೀಡಿಲ್ಲ ಎಲ್ಲೋ ಒಂದು ಕಡೆ ಕುಳಿತು ಗಣತಿ ನಮೂನೆಗಳನ್ನು ತುಂಬಿಕೊಂಡಿದ್ದಾರೆ ಇದರಿಂದ ಬಹಳಷ್ಟು ಜನ ಮತದಾರರು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಿಂದ ಹೊರಗೆ ಉಳಿದಿದ್ದಾರೆ ಇಂತಹ ಮತದಾರರನ್ನು ಮತದಾರ ಪಟ್ಟಿಯಲ್ಲಿ ಸೇರಿಸಲು ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಇನ್ನು ಒಂದು ತಿಂಗಳು ವಿಸ್ತರಿಸಬೇಕೆಂದು ಎಸ್ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳ ಜನಪರ ಸಂಘಟನೆಗಳ ಒಕ್ಕೂಟದ ಕುಮಾರ್ ಸಮತಳ ಚುನಾವಣಾ ಆಯೋಗವನ್ನು ಮತ್ತು ರಾಜ್ಯ, ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.**




ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಎಸ್ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಜನಪರ ಸಂಘಟನೆಗಳ ಒಕ್ಕೂಟ ಕರ್ನಾಟಕ ವತಿಯಿಂದ ಹಮ್ಮಿಕೊಂಡಿದ್ದ ಸುದ್ದಿ ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿ, ಕಳೆದ ಒಂದು ತಿಂಗಳ ಅವಧಿಯಲ್ಲಿ ನಡೆದ ಎಸ್ಐಆರ್ ಪ್ರಕ್ರಿಯೆಯಿಂದ ಸುಮಾರು ಒಂದು ಕೋಟಿ ಹತ್ತು ಲಕ್ಷ ಐವತ್ತೊಂಬತ್ತು ಸಾವಿರ ಮತದಾರರು ಪಟ್ಟಿಯಿಂದ ಕೈ ಬಿಟ್ಟು ಹೋಗುವ ಸಾಧ್ಯತೆ ಇದೆ ಇದು ಮತದಾರರ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರವಾಗಿದೆ ಯಾವುದೇ ಕಾರಣಕ್ಕೂ ಇದನ್ನು ಮಾನ್ಯ ಮಾಡದೆ ಎಸ್ ಐ ಆರ್ ಅನ್ನು ಸಮರ್ಪಕ ರೀತಿಯಲ್ಲಿ ನಡೆಸಲು ಮತ್ತೊಂದು ತಿಂಗಳು ಕಾಲಾವಕಾಶವನ್ನು ಪಡೆದುಕೊಂಡು ಎಸ್ಐಆರ್ ನಿಂದ ಹೊರಗೆ ಉಳಿದವರನ್ನು ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕೆಂದರು. ನಾವು ಪಶ್ಚಿಮ ಬಂಗಾಳ ಮತ್ತು ಬಿಹಾರದಲ್ಲಿ ಬಹಳಷ್ಟು ಮತದಾರರ ಹೆಸರುಗಳನ್ನು ಡಿಲೀಟ್ ಮಾಡಿದ್ದಾರೆ ಎಂದುಕೊಂಡಿದ್ದೆವು ಆದರೆ ನಮ್ಮ ರಾಜ್ಯದಲ್ಲಿ ಅದಕ್ಕಿಂತಲೂ ಹೆಚ್ಚು ಮತದಾರರ ಹೆಸರನ್ನು ಈ ಪರಿಷ್ಕರಣೆಯ ನೆಪದಲ್ಲಿ ಕೈ ಬಿಡಲಾಗಿದೆ ಇದರಿಂದ ಸುಮಾರು 1.10 ಕೋಟಿ ಜನ ಮತದಾನದಿಂದ ವಂಚಿತಗೊಳ್ಳಲಿದ್ದಾರೆ ಇಂದ ಅವರು, ಕೂಲಿ ಕಾರ್ಮಿಕರು ವಲಸೆ ಕಾರ್ಮಿಕರು ಮನೆಯಲ್ಲಿ ಇಲ್ಲದವರು ಎಂದು ಬರೆದುಕೊಂಡ ಟಿಪ್ಪಣಿಯನ್ನು ಪರಿಶೀಲಿಸಿ ಕಾರ್ಮಿಕರಿರುವ ಕಡೆಯಲ್ಲಿ ಅವರಿಗೆ ಗಣಿತಿ ನಮೂನೆಗಳನ್ನು ನೀಡಿ ಎಸ್ಐಆರ್ ನಲ್ಲಿ ಸೇರಿಸಿಕೊಳ್ಳಬೇಕು, ಮತ್ತು ಈಗಾಗಲೇ ಎಸ್ಐಆರ್ ಅರ್ಜಿಗಳನ್ನು ತೆಗೆದುಕೊಂಡು ಅವುಗಳನ್ನು ಸಲ್ಲಿಸಲಾಗದೆ ಇರುವವರ ಮನೆಗೆ ಹೋಗಿ ಅಥವಾ ಅವರನ್ನು ಹುಡುಕಿಕೊಂಡು ಹೋಗಿ ಗಣತಿ ನಮೂನೆಗಳನ್ನು ಪಡೆದುಕೊಳ್ಳಬೇಕೆಂದು ತಾಕೀತು ಮಾಡಿದರು. ವಕೀಲರಾದ ಆಯುಬ್ ಮಾತನಾಡಿ 2002ರ ಮತದಾರ ಪಟ್ಟಿಯನ್ನು ಮ್ಯಾಪಿಂಗ್ ಮಾಡಿದಾಗಲೇ ನಕಲಿ ಮತದಾರರು ಪತ್ತೆಯಾಗಿರುತ್ತಾರೆ ಅದರ ನಂತರ ಗಣತಿ ನಮೂನೆ ನೀಡುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದ ಆಯುಬ್, ಎಸ್ಐಆರ್ ನಿಂದ ಹೊರಗೆ ಉಳಿಯುವ ಮತದಾರರ ರಕ್ಷಣೆಗೆಂದು ಪ್ರತಿ ಜಿಲ್ಲೆ ಮತ್ತು ತಾಲೂಕಿನಲ್ಲಿ ಮತದಾರ ಕಾನೂನು ಕಾವಲು ಸಮಿತಿಯನ್ನು ರಚಿಸಿಕೊಂಡು ಮತದಾರರ ಬೆನ್ನಿಗೆ ನಿಲ್ಲುತ್ತೇವೆ ಎಂದರು.

# ಬಾಕಿ ಸೌಲಭ್ಯಗಳ ಶೀಘ್ರ ಬಿಡುಗಡೆಗೆ ಆಗ್ರಹಿಸಿ ಸಿಎಂಗೆ ಮನವಿ



**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಕರ್ನಾಟಕ ರಾಜ್ಯದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಎದುರಿಸುತ್ತಿರುವ ವಿವಿಧ ಗಂಭೀರ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸಬೇಕೆಂದು ಆಗ್ರಹಿಸಿ 'ಕೊಪ್ಪಳ ಜಿಲ್ಲಾ ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿ' ವತಿಯಿಂದ ಮಂಗಳವಾರ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು.**

ನಗರದ ಅಶೋಕ ವೃತ್ತದಲ್ಲಿ ಸಮಾವೇಶಗೊಂಡ ನೂರಾರು ಕಟ್ಟಡ ಕಾರ್ಮಿಕರು,ಸರ್ಕಾರದ ವಿಳಂಬ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿ ಜಿಲ್ಲಾ ಆಡಳಿತ ಭವನ ತಲುಪಿ ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ ಅವರ ಮೂಲಕ ಮಾನ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವಿ ಚನ್ನಣ್ಣನವರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ವಿವಿಧ ಸಂಘಟನೆಗಳ ಪ್ರಮುಖ ಮುಖಂಡರ ಆಗ್ರಹಗಳು: ಐಎಫ್ಟಿಯು ಜಿಲ್ಲಾ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್ ಮಾತನಾಡಿ "ಸರ್ಕಾರ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಯನ್ನು ಸಮರ್ಪಕವಾಗಿ ಬಳಸುತ್ತಿಲ್ಲ. ಹಲವು ತಿಂಗಳುಗಳಿಂದ ಬಾಕಿ ಇರುವ ಶೈಕ್ಷಣಿಕ ಸಹಾಯಧನವನ್ನು ಹೈಕೋರ್ಟ್ ಆದೇಶದಂತೆ ತಕ್ಷಣವೇ ಮಂಜೂರು ಮಾಡಬೇಕು.

ಹಕ್ಕುಗಳಿಗಾಗಿ ಕಾರ್ಮಿಕರು ಕಚೇರಿಗಳಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿರುವುದು ದುಃಖಕರ."ಎಂದು ಆಕ್ರೋಶದಿಂದ ಆಗ್ರಹಿಸಿದರು. ಸಿಐಟಿಯು ಕಾರ್ಮಿಕ ಮುಖಂಡ: ಖಾಸಿಮ್ ಸರ್ದಾರ್ ಮಾತನಾಡಿ "ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರವನ್ನು ರದ್ದುಪಡಿಸಬೇಕು.ಮಾಸಿಕ ಪಿಂಚಣಿಯನ್ನು 5,000ಕ್ಕೆ ಹಾಗೂ ಮದುವೆ ಸಹಾಯಧನವನ್ನು 2 ಲಕ್ಷಕ್ಕೆ ಏರಿಸಬೇಕು. ಹೆರಿಗೆ ಸಹಾಯಧನವನ್ನು ಚೆಕ್ ಬದಲಿಗೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ (DBT) ಜಮಾ ಮಾಡಬೇಕು."ಎಂದು ಒತ್ತಾಯಿಸಿದರು. ಎಐಯುಟಿಯುಸಿ ಜಿಲ್ಲಾ ಮುಖಂಡ ಶರಣು ಗಡ್ಡಿ ಮಾತನಾಡಿ "ಕಾರ್ಮಿಕರ ಹೆಸರಿನಲ್ಲಿ ನಡೆಯುವ ಅನಗತ್ಯ 'ಕಿಟ್ ಖರೀದಿ' ಪದ್ಧತಿಯನ್ನು ತಕ್ಷಣವೇ ನಿಲ್ಲಿಸಿ, ಆ ಹಣವನ್ನು ನೇರವಾಗಿ ಕಾರ್ಮಿಕರ ಖಾತೆಗೆ ಹಾಕಿ.

ಬೋಗಸ್ ಕಾರ್ಡ್‌ಗಳನ್ನು ರದ್ದುಪಡಿಸಿ, ನೈಜ ಕಾರ್ಮಿಕರಿಗೆ ಸೌಲಭ್ಯ ನೀಡಿ. ಕೇಂದ್ರ ಸರ್ಕಾರದ 4 ಕಾರ್ಮಿಕ ಸಂಹಿತೆಗಳು ಹಾಗೂ ರಾಜ್ಯ ಸರ್ಕಾರದ ಕನಿಷ್ಠ ವೇತನ ಪುನರ್‌ಪರಿಶೀಲನೆಯನ್ನು ಹಿಂಪಡೆದು, ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಿ."ಎಂದು ಕಟ್ಟಡ ಕಾರ್ಮಿಕರ ಮಂಡಳಿಗೆ ಸಲಹೆ ನೀಡಿದರು. ಐಎಫ್‌ಟಿಯು ಜಿಲ್ಲಾ ಸಂಘಟನಾ ಸಂಚಾಲಕ ತುಕಾರಾಮ್ ಪಾತ್ರೋಟಿ ಮಾತನಾಡಿ "ನೋಂದಣಿ, ನವೀಕರಣ ಹಾಗೂ ಅರ್ಜಿಗಳ ವಿಲೇವಾರಿಯಲ್ಲಿ ತೀವ್ರ ವಿಳಂಬವಾಗುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ವಿಶೇಷ ಅಭಿಯಾನ ನಡೆಸಬೇಕು ಮತ್ತು ಕಾರ್ಮಿಕ ಸಂಘಟನೆಗಳೊಂದಿಗೆ ನಿಯಮಿತ ಸಮಾಲೋಚನೆ ನಡೆಸಬೇಕು."ಎಂದು ಹೇಳಿದರು.

ಐಎಫ್ಟಿಯು ಜಿಲ್ಲಾ ಮುಖಂಡ ಎಸ್.ಎ.ಗಫಾರ್ ಮಾತನಾಡಿ "ಕಾರ್ಮಿಕ ಸೆಸ್ ಹಣವು ಕೇವಲ ಅವರ ಕಲ್ಯಾಣ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗೆ ಮಾತ್ರ ಬಳಕೆಯಾಗಬೇಕು. ಯೋಜನಾ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು." ಇಲ್ಲದಿದ್ದರೆ ಉಗ್ರ ಹೋರಾಟ ಎದುರಿಸಬೇಕಾಗುತ್ತದೆ. ನ್ಯಾಯಸಮ್ಮತ ಬೇಡಿಕೆಗಳನ್ನು ಸರ್ಕಾರ ತಕ್ಷಣವೇ ಈಡೇರಿಸದಿದ್ದರೆ, ಮುಂಬರುವ ದಿನಗಳಲ್ಲಿ ರಾಜ್ಯಾದ್ಯಂತ ಕಟ್ಟಡ ಕಾರ್ಮಿಕರನ್ನು ಸಂಘಟಿಸಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದರು.

ಈ ಪ್ರತಿಭಟನಾ ಮೆರವಣಿಗೆಯಲ್ಲಿ ಎಐಸಿಸಿಟಿಯು ಮುಖಂಡ ಹನುಮಂತಪ್ಪ ಹುಲಿಹೈದರ, ಪಾಸ್ಟರ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್, ಕಟ್ಟಡ ಕಾರ್ಮಿಕರ ಸಂಘಟನೆಯ ಮುಖಂಡ ಮೌಲಾ ಹುಸೇನ್ ಹಣಗಿ. ಭಾಗ್ಯನಗರ ಕಟ್ಟಡ ಕಾರ್ಮಿಕರ ಸಂಘಟನೆಯ ಅಧ್ಯಕ್ಷ ಮೌಲಾ ಸಾಬ್ ಕಪಾಲಿ.ಮಖಬೂಲ್ ರಾಯಚೂರು, ಗಾಳೆಪ್ಪ ಮುಂಗೋಲಿ,ಅಮೀರ್ ಪಾಷಾ, ಮಂಜುನಾಥ, ದೇವಪ್ಪ ಕಟ್ಟಿಮನಿ, ರೇಣುಕಮ್ಮ, ರಾಜೇಶ್ವರಿ, ಲಕ್ಷ್ಮಿ ಉಪ್ಪಾರ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಹಾಗೂ 500ಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರು ಭಾಗವಹಿಸಿದ್ದರು.

# ಕ್ಷೇತ್ರದ ಜನತೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಹಾರೈಕೆಯ ಫಲದಿಂದ ನಾಲ್ಕನೇ ಬಾರಿ ಸಚಿವ ಸ್ಥಾನ ದೊರಕಿದೆ

**ಅ.ಶ. ಸುದ್ದಿ ಕನಕಗಿರಿ**

**ಕನಕಗಿರಿ: ತಾಲೂಕಿನ ಸೂಳೆಕಲ್, ಹುಲಿಹೈದರ್, ಸೇರಿದಂತೆ ವಿವಿಧ ಭಾಗಗಳಲ್ಲಿ ಬರವೀಕ್ಷಿಸಿ ತಾಲೂಕಿನ ಕನಕಗಿರಿ ಕನಕಾಚಲ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಕನಕಗಿರಿ ಕ್ಷೇತ್ರದ ಜನತೆ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರ ಆಶೀರ್ವಾದ ಮತ್ತು ಬೆಂಬಲದಿಂದ ನನಗೆ ಮತ್ತೊಮ್ಮೆ ಸಚಿವ ಸ್ಥಾನ ದೊರೆತಿದೆ ಎಂದು ಸಚಿವ ಶಿವರಾಜ್ ತಂಗಡಿಗಿ ಹೇಳಿದರು.**



ಅವರು, "ನನ್ನ ಮೇಲೆ ವಿಶ್ವಾಸವಿಟ್ಟು ಬೆಂಬಲ ನೀಡಿದ ಕ್ಷೇತ್ರದ ಮತದಾರರು, ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ನಾನು ಚಿರಋಣಿಯಾಗಿದ್ದೇನೆ. ಅವರ ಆಶೀರ್ವಾದ ಮತ್ತು ಸಹಕಾರದಿಂದ ಮತ್ತೊಮ್ಮೆ ಸಚಿವನಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತಿದೆ. ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಕೆಲಸ ಮಾಡುತ್ತೇನೆ" ಎಂದು ತಿಳಿಸಿದರು. ಕ್ಷೇತ್ರದ ಸಮಗ್ರ ಅಭಿವೃದ್ಧಿ, ಮೂಲಸೌಕರ್ಯ ವೃದ್ಧಿ ಹಾಗೂ ಜನಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವುದಾಗಿ ಅವರು ಹೇಳಿದರು. ಪಕ್ಷದ ರಾಷ್ಟ್ರೀಯ ಹಾಗೂ ರಾಜ್ಯ ನಾಯಕತ್ವಕ್ಕೂ ಸಚಿವ ಸ್ಥಾನ ನೀಡಿದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಜಿಲ್ಲಾಧಿಕಾರಿ ಡಾ. ಸುರೇಶ್ ಇಟ್ನಾಳ, ಗಂಗಾವತಿ ಪೊಲೀಸ್ ಉಪವಿಭಾಗ ಅಧಿಕಾರಿ ಡಿವೈಎಸ್ಪಿ ನ್ಯಾಮಗೌಡ, ಸಹಾಯಕ ಆಯುಕ್ತ ಮೆಹಬೂಬ ಜಿಲಾನಿ, ಜಿಪಂ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ಕೃಷಿ ನಿರ್ದೇಶಕ ಕೃಷ್ಣಮೂರ್ತಿ, ಜಂಟಿ ತೋಟಗಾರಿಕಾ ನಿರ್ದೇಶಕ ಕೃಷ್ಣ ಉಕ್ಕುಂದ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಚಿವರಿಗೆ ಅಭಿನಂದನೆ ಸಲ್ಲಿಸಿದರು.



# ಜಿಲ್ಲೆಯ ಯಾವುದೇ ರೈತರು ಬೆಳೆ ಸಾಲ ಸೌಲಭ್ಯದಿಂದ ವಂಚಿತರಾಗದಂತೆ ಕ್ರಮ ವಹಿಸಿ: ಡಾ.ಸುರೇಶ ಬಿ.ಇಟ್ನಾಳ

**ಅ.ಶ. ಸುದ್ದಿ ಕೊಪ್ಪಳ**

**ಕೊಪ್ಪಳ: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯಾದ್ಯಂತ ಸಮರ್ಪಕ ಮಳೆಯಾಗದ ಕಾರಣ ಅನೇಕ ಪ್ರದೇಶಗಳಲ್ಲಿ ಬೆಳೆಗಳ ಬೆಳವಣಿಗೆ ಕುಂಠಿತಗೊಂಡಿದ್ದು, ಬೆಳೆ ಇಳುವರಿ ಗಣನೀಯ ಪ್ರಮಾಣದಲ್ಲಿ ಕುಸಿಯುವ ಸಾಧ್ಯತೆ ಇದೆ. ಇದರಿಂದ ರೈತರು ನಿರೀಕ್ಷಿತ ಆರ್ಥಿಕ ಲಾಭವನ್ನು ಪಡೆಯಲು ಸಾಧ್ಯವಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಪರಿಸ್ಥಿತಿ ನಿರ್ಮಾಣವಾಗಿದೆ.**



ಈ ಹಿನ್ನೆಲೆಯಲ್ಲಿ ರೈತರಿಗೆ ಅಗತ್ಯ ಆರ್ಥಿಕ ನೆರವು ಒದಗಿಸುವ ಉದ್ದೇಶದಿಂದ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಯಾವುದೇ ರೈತರು ಬೆಳೆ ಸಾಲ ಸೌಲಭ್ಯದಿಂದ ವಮುಚಿತರಾಗದಂತೆ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚಿಸಿದರು. ಮಂಗಳವಾರದಂದು ಜಿಲ್ಲಾ ಪಂಚಾಯತಿಯ ಜೆ. ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಬೆಳೆ ಸಾಲದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಯಾವುದೇ ಅರ್ಹ ರೈತರು ಬೆಳೆ ಸಾಲದ ಸೌಲಭ್ಯದಿಂದ ವಂಚಿತರಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಇದುವರೆಗೂ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಸಾಲ ಪಡೆಯದಿರುವ ರೈತರನ್ನು ಗ್ರಾಮ ಮಟ್ಟದಲ್ಲಿ ಗುರುತಿಸಿ,

ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಅಧಿಕಾರಿಗಳು ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಿ ವಿಶೇಷ ಕಿಸಾನ್ ಕ್ರೆಡಿಟ್ ಕಾರ್ಡ್ ನೋಂದಣಿ ಹಾಗೂ ಸಾಲ ಮಂಜೂರಾತಿ ಶಿಬಿರಗಳನ್ನು ಗ್ರಾಮ ಪಂಚಾಯಿತಿ ಹಾಗೂ ರೈತ ಸಂಪರ್ಕ ಕೇಂದ್ರಗಳ ಮಟ್ಟದಲ್ಲಿ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅರ್ಹ ರೈತರಿಂದ ಅಗತ್ಯ ದಾಖಲೆಗಳನ್ನು ಸ್ಥಳದಲ್ಲಿಯೇ ಸ್ವೀಕರಿಸಿ, ಅರ್ಜಿಗಳ ಪರಿಶೀಲನೆ ಹಾಗೂ ಅನುಮೋದನೆ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಮೂಲಕ ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ ಬೆಳೆ ಸಾಲವನ್ನು ಮಂಜೂರು ಮಾಡಿ ವಿತರಿಸಬೇಕು ಎಂದು ಬ್ಯಾಂಕುಗಳ ವ್ಯವಸ್ಥಾಪಕರಿಗೆ ಸೂಚಿಸಿದರು.

ರೈತರಿಗೆ ಕೆಸಿಸಿ ಯೋಜನೆಯ ಪ್ರಯೋಜನಗಳು, ಸಾಲದ ಮಿತಿಗಳು ಹಾಗೂ ಮರುಪಾವತಿ ಸೌಲಭ್ಯಗಳ ಕುರಿತು ವ್ಯಾಪಕವಾಗಿ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬೆಳೆಗಾರ ರೈತರಷ್ಟೇ ಅಲ್ಲದೆ ಪಶುಪಾಲನೆ, ಹೈನುಗಾರಿಕೆ, ಕುರಿ-ಮೇಕೆ ಸಾಕಾಣಿಕೆ, ಕೋಳಿ ಸಾಕಾಣಿಕೆ ಹಾಗೂ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಅರ್ಹ ರೈತರಿಗೆ ಸಹ ಕೆಸಿಸಿ ಯೋಜನೆಯಡಿ ಸಾಲ ಸೌಲಭ್ಯವನ್ನು ಆದ್ಯತೆಯ ಮೇರೆಗೆ ಮಂಜೂರು ಮಾಡಿ ಆರ್ಥಿಕ ನೆರವು ಒದಗಿಸಬೇಕು. ವಿವಿಧ ಇಲಾಖೆಗಳು ಹಾಗೂ ಬ್ಯಾಂಕುಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ, ಸರ್ಕಾರದ ಉದ್ದೇಶದಂತೆ ರೈತರಿಗೆ ಸಮಯೋಚಿತವಾಗಿ ಸಾಲ ಸೌಲಭ್ಯವನ್ನು ತಲುಪಿಸುವ ಮೂಲಕ ಅವರ ಕೃಷಿ ಹಾಗೂ ಕೃಷಿ-ಸಂಬಂಧಿತ ಚಟುವಟಿಕೆಗಳಿಗೆ ಅಗತ್ಯ ಆರ್ಥಿಕ ಬೆಂಬಲವನ್ನು ಒದಗಿಸಬೇಕು ಎಂದು ಸಭೆಯಲ್ಲಿ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಜೆ.ಡಿ ಕೃಷ್ಣಮೂರ್ತಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಮಲ್ಲಯ್ಯ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ಮಾರುತಿ ಸೇರಿದಂತೆ ತೋಟಗಾರಿಕೆ ಇಲಾಖೆ, ಮೀನುಗಾರಿಕೆ ಇಲಾಖೆ, ರೇಷ್ಮೆ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ಕ್ಷೇತ್ರ ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ರಾಷ್ಟ್ರೀಕೃತ, ಪ್ರಾದೇಶಿಕ ಗ್ರಾಮೀಣ ಹಾಗೂ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕರು ಭಾಗವಹಿಸಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka